

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ:13 ಸಂಚಿಕೆ:5 ಪುಟ 8 | ಸುತ್ತೂರು ಶ್ರೀಕ್ಷೇತ್ರ | ಮಂಗಳವಾರ, 5 ಫೆಬ್ರವರಿ 2019


## ಕೃಷಿ ಒಂದು ಸಂಕೀರ್ಣ ಕ್ಷೇತ್ರ


### ಸಚಿವರಾದ ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ

**ಸುತ್ತೂರು ಶ್ರೀಕ್ಷೇತ್ರ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವ ಯೋಗಿಗಳವರ ಜಾತ್ರಾ ಮಹೋತ್ಸವ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯ ದಲ್ಲಿ ನೆರವೇರಿತು.

ಸಹಸ್ರಾರು ವರ್ಷಗಳ ಇತಿಹಾಸ ವಿರುವ ಸುತ್ತೂರು ಶ್ರೀಮಠವು ಶಿಕ್ಷಣ, ದಾಸೋಹ, ಕೃಷಿ ಕ್ಷೇತ್ರದಲ್ಲಿ ಸಮಾಜ ಸೇವೆಯನ್ನು ಮಾಡುತ್ತಾ ಬಂದಿದೆ. ರೈತರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಶ್ರೀಮಠವು ಯಾವುದೇ ವಿಶ್ವವಿದ್ಯಾಲಯದವರೂ ಮಾಡದಿರುವ ಕಾರ್ಯಗಳನ್ನು ರೈತರಿಗಾಗಿ ಮಾಡುತ್ತಿದೆ ಎಂದು ಕೃಷಿ ಸಚಿವ ರಾದ ಶ್ರೀ **ಎನ್.ಹೆಚ್. ಶಿವಶಂಕರ ರೆಡ್ಡಿರವರು** ಹೇಳಿದರು.

ಕೃಷಿ ವಿಚಾರಸಂಕಿರಣದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಹಿಂದಿನ ಕಾಲದಲ್ಲಿ ರೈತರು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದರು. 60ರ ದಶಕದ ನಂತರ ಕೃಷಿಯು ಅಭಿವೃದ್ಧಿ ಕಾಣಲೆಂದು ಆಧುನಿಕ ಕೃಷಿ ಪದ್ಧತಿಯನ್ನು ಜಾರಿಗೆ ತರಲಾಯಿತು. ಇದರಿಂದ ಉತ್ಪಾದನೆಯು ಹೆಚ್ಚಾಯಿತು. ಅಷ್ಟೇ ಉತ್ಪಾದನಾ ವೆಚ್ಚವೂ ಸಹ ಹೆಚ್ಚಾಯಿತು ಆಧುನಿಕ ಕೃಷಿ ಪದ್ಧತಿಯಲ್ಲಿ ಹೆಚ್ಚು ರಾಸಾಯನಿಕ ಗೊಬ್ಬರಗಳು

7ನೇ ಪುಟಕ್ಕೆ



ಮಂಗಳಮಯವಾಗಿ ಬೆಳಗಿದ ಲಕ್ಷದೀಪೋತ್ಸವ



ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಪೇಜಾವರ ಶ್ರೀಗಳವರನ್ನು ಜಗದ್ಗುರುಗಳವರು ಆತ್ಮೀಯವಾಗಿ ಬರಮಾಡಿಕೊಂಡರು. ಚಿತ್ರದಲ್ಲಿ ಶ್ರೀ ಜಯರಾಜೇಂದ್ರ ಸ್ವಾಮಿಗಳವರಿದ್ದಾರೆ

## ಬಂಜರು ಭೂಮಿ ಫಲ ನೀಡದು



ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭ ದಲ್ಲಿ ಮಾನ್ವಿ ತಾಲ್ಲೂಕಿನ ಕವಿತಾಳದ **ಶ್ರೀಮತಿ ಕವಿತಾ ಮಿಶ್ರಾರವರು,** ರೈತರು ಆರ್ಥಿಕವಾಗಿ ಸದೃಢರಾಗಬೇಕು. ಎಲ್ಲದಕ್ಕೂ ಸರ್ಕಾರಗಳನ್ನು ಅವಲಂಬಿಸಬಾರದು ಬೇರೆಯವರು ನಮ್ಮ ಕಷ್ಟಕ್ಕೆ ನಿಲ್ಲುತ್ತಾರೆ ಎಂದು ಕಾಯದೆ ಸ್ವಾವಲಂಬಿಗಳಾಗಿ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು, ಜೀವನದಲ್ಲಿ ಕಷ್ಟ–ಸುಖಗಳು ಸಾಮಾನ್ಯ, ಅದಕ್ಕೆಲ್ಲಾ ಭಯಪಟ್ಟು ಆತ್ಮಹತ್ಯೆ ಮಾಡಿಕೊಳ್ಳಬಾರದು. ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ವಿವಿಧ ಬೆಳೆಗಳನ್ನು ಬೆಳೆದು ಕೃಷಿಯನ್ನು ಲಾಭದಾಯಕವನ್ನಾಗಿಸಿಕೊಳ್ಳಬೇಕು. ಅನ್ನದಾತರು ಎಂದಿಗೂ ಬೇಡುವಂತಿರಬಾರದು, ನೀಡುವಂತಿರಬೇಕು. 'ಒಕ್ಕಲಿಲ್ಲದ ಊರು ಮಕ್ಕಳಿಲ್ಲದ ಮನೆ ಸ್ಮಶಾನವಿದ್ದಂತೆ' ಎನ್ನುವ ಹಾಗೇ 'ಬೆಳೆ ಬೆಳೆಯದ ಭೂಮಿಯು ಸ್ಮಶಾನವಿದ್ದಂತೆ' ಎಂದು ಹೇಳಿದರು. –ಸುನೀತಾ ಸಿ.ಕೆ

## ದೇಶದ ಸಂಸ್ಕೃತಿಯನ್ನು ಉಳಿಸಿ–ಬೆಳೆಸಿ

### ಪೇಜಾವರ ಶ್ರೀಗಳು

ಕೃಷಿ ವಿಚಾರಸಂಕಿರಣದ ಸಮಾರೋಪ ಸಮಾರಂಭದ ಸಮ್ಮುಖ ವಹಿಸಿದ್ದ ಪೇಜಾವರ ಮಠದ ಶ್ರೀ **ವಿಶ್ವೇಶ್ವರ ತೀರ್ಥ ಶ್ರೀ ಪಾದಂಗಳವರು** ತಮ್ಮ ಶುಭಸಂದೇಶದಲ್ಲಿ ಸುತ್ತೂರು ಶ್ರೀಮಠ ಜಾತ್ಯತೀತವಾಗಿ ಕಾರ್ಯ ನಿರ್ವಹಿಸುತ್ತಿದೆ. ದೇಶದಲ್ಲಿ ಹಲವು ಧರ್ಮ, ಭಾಷೆಗಳಿದ್ದರೂ ಎಲ್ಲರ ಹೃದಯ ಒಂದೇ ಆಗಿರುತ್ತದೆ. ಆದುದರಿಂದ ಎಲ್ಲಾ ಧರ್ಮ ಭಾಷೆಗಳನ್ನು ಗೌರವಿಸಬೇಕು. ಭಾರತದ ಸಂಸ್ಕೃತಿ ಶ್ರೇಷ್ಠವಾದದು ಇಂತಹ ಸಂಸ್ಕೃತಿಯನ್ನು ಬೆಳೆಸಲು ಶ್ರೀಮಠವು ಕಾರ್ಯ ನಿರ್ವಹಿಸುತ್ತಿದೆ. ಪ್ರತಿಯೊಬ್ಬರೂ ರಾಷ್ಟ್ರದ ಬಗ್ಗೆ ಅಪಾರ ಪ್ರೀತಿ–ಗೌರವಗಳನ್ನು ಇಟ್ಟುಕೊಳ್ಳಬೇಕು. ಅಲ್ಲದೆ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಶ್ರಮಿಸಬೇಕು. ಈ ದಿಸೆಯಲ್ಲಿ ಜಾತ್ರಾ ಮಹೋತ್ಸವವು ಪ್ರಮುಖ ಪಾತ್ರವನ್ನು ವಹಿಸುತ್ತಿದೆ ಎಂದರು. –ಕೆ.ಎಸ್. ತೇಜಶ್ರೀ




ಜಾತ್ರಾ ಮಹೋತ್ಸವದಲ್ಲಿ ಕೃಷಿ ವಿಚಾರಸಂಕಿರಣ ಉದ್ಘಾಟನೆ ನೆರವೇರಿಸುತ್ತಿರುವ ಕೃಷಿ ಸಚಿವರಾದ ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿಯವರು. ಚಿತ್ರದಲ್ಲಿ ಶ್ರೀ ವಿ. ಕಾಂತರಾಜು, ಶ್ರೀ ಚಿನ್ನಸ್ವಾಮಿ ವಡ್ಡಗೆರೆ, ಶ್ರೀ ಎಂ. ಶಿವಣ್ಣ, ಶ್ರೀ ಸಿ. ಅನಿಲ್‌ಕುಮಾರ್, ಡಾ. ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳು ಹಾಗೂ ಡಾ. ಎಂ. ಮಹದೇವಪ್ಪ ಮೊದಲಾದವರುಗಳಿದ್ದಾರೆ.

### ಜಾತ್ರೆಯಲ್ಲಿ ಇಂದು

**ಮಧ್ಯಾಹ್ನ 2.00**
ಕುಸ್ತಿ ಪಂದ್ಯಾವಳಿ

**ಸಂಜೆ 6.30**
ಶ್ರೀ ವೀರಭದ್ರೇಶ್ವರ ಕೊಂಡೋತ್ಸವ

**ರಾತ್ರಿ 9.00**
ತೆಪ್ಪೋತ್ಸವ

# ಕೃಷಿಯಿಂದ ವಿಮುಖರಾಗುತ್ತಿರುವ ಗ್ರಾಮೀಣ ಯುವಕರು

## ಶ್ರೀ ಚಿನ್ನಸ್ವಾಮಿ ವಡ್ಡಗೆರೆ ವಿಷಾದ

ಗ್ರಾಮೀಣ ಪ್ರದೇಶದ ಯುವ ಸಮುದಾಯ ಇಂದು ಕೃಷಿಯಿಂದ ವಿಮುಖರಾಗುತ್ತಿದ್ದಾರೆ ಎಂದು ಗುಂಡ್ಲುಪೇಟೆ ತಾಲ್ಲೂಕಿನ ವಡ್ಡಗೆರೆ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಚಿನ್ನಸ್ವಾಮಿ ವಡ್ಡಗೆರೆಯವರು ವಿಷಾದ ವ್ಯಕ್ತಪಡಿಸಿದರು.

ಕೃಷಿ ವಿಚಾರಸಂಕಿರಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು ನಗರಪ್ರದೇಶದ ಕಡೆ ಆಕರ್ಷಿತರಾಗಿ ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಕೃಷಿ ಬಿಟ್ಟು ಬೇರೆ ಬೇರೆ ಖಾಸಗಿ ಕಂಪನಿಗಳ ಕೆಲಸಗಳಿಗೆ ಸೇರುತ್ತಿದ್ದಾರೆ, ಇದರಿಂದ ಮುಂದೆ ಅಪಾರವಾದ ಸಮಸ್ಯೆ ತಲೆದೋರುತ್ತದೆ ಎಂದು ವಿಷಾದಿಸಿದರು. ರಾಜಕಾರಣಿಗಳು ನಾವು ರೈತರ ಪರವಾಗಿದ್ದೇವೆ ಎಂದು ಹೇಳುತ್ತಾರೆ. ಆದರೆ ರೈತರ ಜೀವನ ಸುಧಾರಿಸಲು ಬೇಕಾದ ಅನುಕೂಲಕರವಾದ ಯೋಜನೆಗಳನ್ನು ರೂಪಿಸುತ್ತಿಲ್ಲ. ರೈತರ ಹೆಸರು ಹೇಳಿಕೊಂಡು ರಾಜಕಾರಣಿಗಳು ತಾವು ಬೆಳೆಯುತ್ತಿದ್ದಾರೆ. ದೇಶದ ರೈತನ ಹೆಗಲ ಮೇಲಿನ ಭಾರವನ್ನು ಸರ್ಕಾರ ನಡೆಸುವವರು ಕಡಿಮೆ ಮಾಡಲು ಪ್ರಯತ್ನಿಸುತ್ತಿಲ್ಲ ಎಂದು ಕುಟುಕಿದರು. ಸರ್ಕಾರಗಳು ರೈತರ ಸಾಲ ಮನ್ನಾ ಮಾಡಿದರೆ ಸಾಲದು. ರೈತರ ಬದುಕನ್ನು ಹಸನುಗೊಳಿಸಲು ಕೃಷಿ ನೀತಿಯನ್ನು ರೂಪಿಸಿ ಉಪಯುಕ್ತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗಿದೆ. ಕೃಷಿಯಲ್ಲಿ ರೈತರು ಕಾಯಕ ಪ್ರಜ್ಞೆ ಹೊಂದಿರಬೇಕು. ಹಳ್ಳಿಗಳಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸಲು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಬೇಕು. ರೈತರು ತಮ್ಮ ಪಾರಂಪರಿಕ ಜ್ಞಾನವನ್ನು ಬೆಳೆಸಿಕೊಂಡು ಕೃಷಿ ಮಾಡಬೇಕು.



ರೈತರು ದೇಶದ ಬೆನ್ನೆಲುಬು, ರೈತರ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿಯಾಗದು. ರೈತರು ವಾದ ಮಾಡುತ್ತಾ ಕಾಲ ಕಳೆಯಬಾರದು. ಪ್ರಜ್ಞಾವಂತರಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು ರೈತರು ಕೃಷಿಯಲ್ಲಿ ತೊಡಗಿಸಿಕೊಂಡು ಆದಾಯವನ್ನು ಹೆಚ್ಚಿಸಿಕೊಳ್ಳಲು ಸುಸ್ಥಿರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು. ಗ್ರಾಮೀಣ ಬದುಕಿನ ಜೀವನಾಡಿಗಳಾದ ಕೆರೆಕಟ್ಟೆಗಳ ನಿರ್ಮಾಣ, ನದಿ ನೀರನ್ನು ಕೆರೆಗೆ ತುಂಬಿಸುವುದು, ನೈಸರ್ಗಿಕ ಕೃಷಿ ಪದ್ಧತಿ ಮುಂತಾದ ಕ್ರಮಗಳನ್ನು ತೆಗೆದುಕೊಂಡರೆ ರೈತರ ಬದುಕು ಉತ್ತಮವಾಗುತ್ತದೆ ಎಂದು ಸಲಹೆ ನೀಡಿದರು. – ಸಿ.ಕೆ. ಸುನೀತ

# ಸುತ್ತೂರು ಜಾತ್ರೆ ಹತ್ತೂರು ಜಾತ್ರೆಗಿಂತ ಸುಂದರ

## ಪ್ರೊ. ಕೆಆರ್‌ಎಂ

ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯರಾದ **ಪ್ರೋ. ಕೆ.ಆರ್ ಮಲ್ಲಿಕಾರ್ಜುನಪ್ಪನವರು** ಮಾತನಾಡಿ ಸುತ್ತೂರು ಜಾತ್ರೆಯು ಒಂದು ವಾರದವರೆಗೆ ಅರ್ಥಪೂರ್ಣವಾಗಿ ನಡೆಯುವಂತಹ ಜಾತ್ರೆಯಾಗಿದ್ದು, ಇಲ್ಲಿ ಶೈಕ್ಷಣಿಕ, ಸಾಮಾಜಿಕ, ವಿಜ್ಞಾನ, ಕಲೆ, ಸಂಸ್ಕೃತಿಯಂತಹ ಹತ್ತು ಹಲವು ಕಾರ್ಯಕ್ರಮಗಳನ್ನು ಕಾಣಬಹುದಾಗಿದೆ. 'ಸುತ್ತೂರು ಜಾತ್ರೆ ಹತ್ತೂರು ಜಾತ್ರೆಗಿಂತ ಸುಂದರ'. ಅತ್ಯಂತ ಕ್ರಿಯಾಶೀಲತೆ, ದೂರದೃಷ್ಟಿಯಿಂದ ಕೂಡಿದ ಹಲವಾರು ವಿಷಯಗಳನ್ನೊಳಗೊಂಡ ವಿಶೇಷ ಜಾತ್ರೆ ಇದಾಗಿದೆ. ಪ್ರತಿಯೋರ್ವನ ಅಂತ್ಯದ ಗುರಿ ಪರಮಾತ್ಮನನ್ನು ಕಾಣುವುದು ನಾವೆಲ್ಲರೂ ಶ್ರೀಗಳವರನ್ನು ಪರಮಾತ್ಮನಂತೆಯೇ ಕಾಣುತ್ತಿದ್ದೇವೆ. ಅಂಬೇಡ್ಕರ್‌ರವರು ಹೇಳಿದ ಹಾಗೆ ಓರ್ವ ರೈತ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಸಾಮೂಹಿಕ ಕೃಷಿ ಪದ್ಧತಿಯನ್ನು ಅನುಸರಿಸಬೇಕು ಎಲ್ಲ ರೈತರೂ ಒಟ್ಟುಗೂಡಿದಾಗ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು.



ದೇಶದಲ್ಲಿ ರೈತಾಪಿ ಜನರಿಗೆ ಹಸಿರುಕ್ರಾಂತಿ ಎಂಬ ಮಹತ್ತರವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮಹಿಳೆ ಮತ್ತು ಪುರುಷರ ನಡುವೆ ಯಾವುದೇ ಬೇಧ–ಭಾವವಿಲ್ಲದೆ ಸಮಾನತೆ ಯೊಂದಿಗೆ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದರು. –ಸುಮ.ಪಿ

# ಸಾಂಸ್ಕೃತಿಕ ಸ್ಪರ್ಧೆಗಳ ಫಲಿತಾಂಶ

## ಪ್ರಾಥಮಿಕ ಶಾಲಾ ವಿಭಾಗ




**ಸಮೂಹ ನೃತ್ಯ ಸ್ಪರ್ಧೆಯಲ್ಲಿ** ಕೋಣನಕುಂಟೆ ಶಾಲೆಯ ವಿದ್ಯಾರ್ಥಿಗಳು ಒಗ್ಗಟ್ಟಿನಿಂದ ನೃತ್ಯ ಪ್ರದರ್ಶನ ನೀಡುವ ಮೂಲಕ ಮೊದಲನೇ ಬಹುಮಾನವನ್ನು ಪಡೆದರೆ, ಎರಡನೇ ಬಹುಮಾನವನ್ನು ತಾಳವಾಡಿಯ ಶಾಲೆಯ ವಿದ್ಯಾರ್ಥಿಗಳು ಪಡೆದರು. ಮೂರನೇ ಬಹುಮಾನವನ್ನು ಹುಲ್ಲಹಳ್ಳಿ ಶಾಲೆಯ ವಿದ್ಯಾರ್ಥಿಗಳು ನಾಟ್ಯ ಮಯೂರರಂತೆ ಹಿಡಿದರೆ, ನಾಲ್ಕನೇ ಬಹುಮಾನವನ್ನು ಸುತ್ತೂರು ಶಾಲೆಯ ವಿದ್ಯಾರ್ಥಿಗಳು ಸ್ವೀಕರಿಸಿದರು. ಮಾಲೂರು ಶಾಲೆಯ ವಿದ್ಯಾರ್ಥಿಗಳು ಐದನೇ ಬಹುಮಾನವನ್ನು ಹಿಡಿದು ತೃಪ್ತಿಪಟ್ಟರು.

**ಸಮೂಹ ಗಾಯನ ಸ್ಪರ್ಧೆಯಲ್ಲಿ** ಸುತ್ತೂರು ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಗಾನ ಕೋಗಿಲೆಗಳಂತೆ ಹಾಡಿ ಪಡೆದರೆ, ರಾಮಪುರ ಶಾಲೆಯ ವಿದ್ಯಾರ್ಥಿಗಳು ಎರಡನೇ ಬಹುಮಾನ ಪಡೆದು ಖುಷಿಪಟ್ಟರು. ಮೂರನೇ ಬಹುಮಾನವನ್ನು ಸಂತೆಮರಳ್ಳಿ ಶಾಲೆಯ ವಿದ್ಯಾರ್ಥಿಗಳು ಸುಮಧುರ ಕಂಠದಿಂದ ಹಾಡುವ ಮೂಲಕ ಪಡೆದರೆ, ನಾಲ್ಕನೇ ಬಹುಮಾನವನ್ನು ಹುಲ್ಲಹಳ್ಳಿ ಶಾಲೆಯ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು, ಐದನೇ ಬಹುಮಾನವನ್ನು ಮಾಲೂರು ಶಾಲೆಯ ವಿದ್ಯಾರ್ಥಿಗಳು ಪಡೆದರು.

**ಒಟ್ಟಾರೆ ಹೆಚ್ಚು ಅಂಕಗಳನ್ನು ಗಳಿಸಿದ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯು ಪರ್ಯಾಯ ಪಾರಿತೋಷಕವನ್ನು ಈ ಬಾರಿಯೂ ತನ್ನದಾಗಿಸಿಕೊಂಡಿದೆ**

**ಸಮೂಹ ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ** ಸುತ್ತೂರು ಶಾಲಾ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದು ನಲಿದರೆ, ಎರಡನೇ ಬಹುಮಾನವನ್ನು ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಪಡೆಯುತ ಕುಣಿದರು. ಮೈಸೂರಿನ ಬಾಲಜಗತ್ ಶಾಲೆಯ ವಿದ್ಯಾರ್ಥಿಗಳು 3ನೇ ಬಹುಮಾನವನ್ನು ಪಡೆದು ತೃಪ್ತಿಪಟ್ಟರು.

**ಶಾಸ್ತ್ರೀಯ ನೃತ್ಯ ಸ್ಪರ್ಧೆಯಲ್ಲಿ** ಸರಗೂರು ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನ ಪಡೆದು ಕುಣಿದು ಕುಪ್ಪಳಿಸಿದರೆ, 2ನೇ ಬಹುಮಾನವನ್ನು ಸುತ್ತೂರು ಶಾಲಾ ವಿದ್ಯಾರ್ಥಿಗಳು ಶಾಸ್ತ್ರೀಯ ನೃತ್ಯ ಭಂಗಿಯ ಮೂಲಕ ಪಡೆದರು. ಮಾಲೂರು ಶಾಲೆಯ ವಿದ್ಯಾರ್ಥಿಗಳು 3ನೇ ಬಹುಮಾನ ಪಡೆದರೆ, 4ನೇ ಬಹುಮಾನವನ್ನು ಸರಸ್ವತಿಪುರ ಶಾಲೆಯ ವಿದ್ಯಾರ್ಥಿಗಳು ಅಪ್ಪಿಕೊಂಡರು. 5ನೇ ಬಹುಮಾನಕ್ಕೆ ಭಾಜನರಾದವರು ಮೇಟಗಳ್ಳಿ ಶಾಲೆಯ ವಿದ್ಯಾರ್ಥಿಗಳು.

**ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ** ಸುತ್ತೂರು ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನದ ಗರಿಯನ್ನು ಮುಡಿಗೇರಿಸಿಕೊಂಡರೆ, ದ್ವಿತೀಯ ಬಹುಮಾನದಲ್ಲಿ ಕುಳಿತವರು ಮೈಸೂರಿನ ಬಾಲಜಗತ್ ಶಾಲೆಯ ವಿದ್ಯಾರ್ಥಿಗಳು.

**ವಚನಾಧಾರಿತ ನೃತ್ಯ ಸ್ಪರ್ಧೆಯಲ್ಲಿ** ಹುಲ್ಲಹಳ್ಳಿ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದು ಮುನ್ನುಗಿದರೆ, ದ್ವಿತೀಯ ಬಹುಮಾನವನ್ನು ಮಾಲೂರು ಶಾಲೆಯ ವಿದ್ಯಾರ್ಥಿಗಳು ವಚನಾಮೃತ ನೃತ್ಯದ ಮೂಲಕ ಪಡೆದರು. 3ನೇ ಬಹುಮಾನವನ್ನು ಸರಗೂರು ಶಾಲೆಯ ವಿದ್ಯಾರ್ಥಿಗಳು ಹಿಡಿದರೆ. 4ನೇ ಬಹುಮಾನಕ್ಕೆ ಸರಸ್ವತಿಪುರಂ ಶಾಲೆಯ ವಿದ್ಯಾರ್ಥಿಗಳು ಮತ್ತು ಐದನೇ ಸ್ಥಾನಕ್ಕೆ ತಾಳವಾಡಿ ಶಾಲೆಯ ವಿದ್ಯಾರ್ಥಿಗಳು ತೃಪ್ತಿಪಟ್ಟರು.

## ಜಾತ್ರಾ ಮಹೋತ್ಸವ ಪೂಜೆ ಉತ್ಸವ

**5 ಫೆಬ್ರವರಿ 2019**

**ಪ್ರಾತಃಕಾಲ 4.00 : ಕರ್ತೃಗದ್ದುಗೆ :** ಮಹಾರುದ್ರಾಭಿಷೇಕ

**ಬೆಳಗ್ಗೆ 6.30 : ಚಿಕ್ಕ ಕವಲಂದೆ : ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥಸಂಚಲನ**

**ಬೆಳಗ್ಗೆ 7.30 : ಷಟ್‌ಸ್ಥಲ ಧ್ವಜಾರೋಹಣ : ನಿ.ಪ್ರ.ಸ್ವ. ಶ್ರೀ ಚಿಕ್ಕ ಗುರುನಂಜೇಶ್ವರ ಸ್ವಾಮಿಗಳು,** ಶ್ರೀ ವಿರಕ್ತ ಮಠ, ಭರತನೂರು, ಕಾಳಗಿ ತಾ.

**ಧರ್ಮಸಂದೇಶ : ಷ.ಬ್ರ. ಶ್ರೀ ಶಿವಪ್ಪ ಸ್ವಾಮಿಗಳು,** ಶ್ರೀ ಪಟ್ಟದ ಮಠ, ದೊಡ್ಡಬೂವಳ್ಳಿ, ಮಳವಳ್ಳಿ ತಾ.

**ಬೆಳಗ್ಗೆ 8.00 : ರಾಜಗುರುತಿಲಕ ಜಗದ್ಗುರು, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 33ನೆಯ ಸಂಸ್ಮರಣೋತ್ಸವ**

**ಬೆಳಗ್ಗೆ 11.00 : ಮಂತ್ರಮಹರ್ಷಿಗಳು ಹಾಗೂ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಗದ್ದುಗೆಗಳಿಗೆ ಮಹಾರುದ್ರಾಭಿಷೇಕ**

**ಸಂಜೆ 6.30 : ಶ್ರೀ ವೀರಭದ್ರೇಶ್ವರ ಕೊಂಡೋತ್ಸವ**

**ರಾತ್ರಿ 9.00 : ತೆಪ್ಪೋತ್ಸವ : ಬಾಣಬಿರುಸುಗಳ ಪ್ರದರ್ಶನ**

## ಜಾತ್ರೆಯೊಳಗೊಂದು ಸುತ್ತು...


### ಇದೇ ಹತ್ತಿರದ ಕಾಶಿ ಕ್ಷೇತ್ರವಾಗಿದೆ



ನಾನು 20 ವರ್ಷಗಳಿಂದ ಶ್ರೀಕ್ಷೇತ್ರಕ್ಕೆ ಬರುತ್ತಿದ್ದೇನೆ. ಪ್ರತೀ ವರ್ಷವೂ ಜಾತ್ರೆಯಲ್ಲಿ ಹೊಸ ಹೊಸ ಜನಜಾಗೃತಿ ಕಾರ್ಯಕ್ರಮಗಳು ಜರುಗುತ್ತಿವೆ. ಇದರಿಂದ ಜನತೆಗೆ ಬಹಳ ಉಪಯುಕ್ತವಾಗಿದೆ. ನಮ್ಮಂಥಹ ವೃದ್ಧರಿಗೆ ಇದೇ ಹತ್ತಿರದ ಕಾಶಿ ಕ್ಷೇತ್ರವಾಗಿದೆ. ವಿಶ್ವದೆಲ್ಲೆಡೆ ಭಕ್ತವೃಂದವನ್ನೊಂದಿರುವ ಶ್ರೀಕ್ಷೇತ್ರವು ಸರ್ವರಿಗೂ ಒಳಿತನ್ನು ಮಾಡುತ್ತಾ ಬಂದಿದೆ.

– **ಶ್ರೀ ಶಿವಲಿಂಗಸ್ವಾಮಿ,** ನಿವೃತ್ತ ಅಭಿಯಂತರರು, ಮೈಸೂರು

### ಪರಮಾನಂದವಾಯಿತು



ಇಲ್ಲಿನ ಜಾತ್ರೆಯ ಬಗ್ಗೆ ಕೇಳಿದ್ದೆವು, ಆದರೆ ಈ ವರ್ಷ ಜಾತ್ರೆಗೆ ಬರುವ ಸೌಭಾಗ್ಯ ದೊರೆತಿದೆ. ತ್ರಿವಿಧ ದಾಸೋಹದ ಪುಣ್ಯಭೂಮಿಯನ್ನು ಕಣ್ಣಾರೆ ಕಂಡು ಪರಮಾನಂದವಾಯಿತು. ಇಂತಹ ಜಾತ್ರೆಯನ್ನು ನಮ್ಮ ಭಾಗದಲ್ಲಿ ಕಾಣಲು ಸಾಧ್ಯವಿಲ್ಲವೆಂದರೆ ತಪ್ಪಾಗಲಾರದು.

– **ಶ್ರೀ ಪರಮಣ್ಣ ವಜ್ಜಪ್ಪ,** ಬೆಳಗಾವಿ

### ರೈತರಿಗೆ ಸ್ಫೂರ್ತಿ



ನಾನು ಮೊದಲ ಬಾರಿಗೆ ಜಾತ್ರೆಗೆ ಬಂದಿದ್ದೇನೆ. ಇಲ್ಲಿಗೆ ಬರುವ ಯಾತ್ರಿಕರಿಗೆ ಪೂಜ್ಯಶ್ರೀಗಳು ಸಕಲ ಸೌಕರ್ಯಗಳನ್ನು ಕಲ್ಪಿಸಲಾಗಿದ್ದು, ಕೃಷಿಗೆ ಸಂಬಂಧಿಸಿದ ಕಾರ್ಯಕ್ರಮಗಳು ರೈತರಿಗೆ ಸ್ಫೂರ್ತಿ ತುಂಬಲು ಸಹಾಯಕವಾಗಿವೆ.

– **ಶೀಮತಿ ರಾಜೇಶ್ವರಿ,** ಧಾರವಾಡ

### ಕಲ್ಪನೆಗೆ ಮೀರಿದ್ದು



ಸುತ್ತೂರು ಜಾತ್ರೆಯು ನನ್ನ ಕಲ್ಪನೆಗೆ ಮೀರಿದ್ದಾಗಿದೆ. ಈ ಜಾತ್ರೆಗೆ ಸೇರುವ ಲಕ್ಷಾಂತರ ಭಕ್ತಾದಿಗಳಿಗೆ ಶ್ರೀಗಳು ದಾಸೋಹವನ್ನು ಕಲ್ಪಿಸಿದ್ದು, ಇಂತಹ ಪವಿತ್ರ ಕ್ಷೇತ್ರಕ್ಕೆ ಬಂದು ದರ್ಶನ ಪಡೆದದ್ದು ನನ್ನ ಪುಣ್ಯವೆಂದೇ ಭಾವಿಸಿದ್ದೇನೆ.

– **ಶ್ರೀ ಮಲ್ಲನಗೌಡ ಪಾಟೀಲ್,** ಚಿಕ್ಕಬಳ್ಳಾಪುರ

(ಯು. ಸ್ವಾತಿ)

# ಚುಂಚನಹಳ್ಳಿಯಲ್ಲಿ ಸ್ನೇಹ.... ಸಿಂಚನ



ಜಾತ್ರಾ ಮಹೋತ್ಸವದ ಅಂಗವಾಗಿ ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ ಕಾರ್ಯಕ್ರಮವನ್ನು ನಂಜನಗೂಡು ತಾಲ್ಲೂಕಿನ ಚುಂಚನಹಳ್ಳಿ ಗ್ರಾಮದಲ್ಲಿ ಸೋಮವಾರ ಮುಂಜಾನೆ ಭಕ್ತಿ ಶ್ರದ್ಧೆಯಿಂದ ನೆರವೇರಿಸಲಾಯಿತು. ಊರಿನ ಪ್ರಮುಖ ಬೀದಿಗಳಲ್ಲಿ ಶಾಲಾ ಮಕ್ಕಳ ಪಥಸಂಚಲನದೊಂದಿಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವಮೂರ್ತಿಯನ್ನು ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

ಮಳವಳ್ಳಿ ತಾಲ್ಲೂಕಿನ ಕುಂದೂರು ಶ್ರೀ ದೊಡ್ಡಮಠದ ಷ.ಬ್ರ.ಶ್ರೀ ಇಮ್ಮಡಿ ಬಸವರಾಜೇಂದ್ರ ಸ್ವಾಮಿಗಳು ಧರ್ಮ ಸಂದೇಶವನ್ನು ಶ್ಲೋಕದ ಮೂಲಕ ಆರಂಭಿಸುತ್ತಾ, ದಕ್ಷಿಣ ಕಾಶಿ ಎನಿಸಿಕೊಂಡ ನಂಜನಗೂಡು ಪವಿತ್ರವಾದ ತಾಲ್ಲೂಕು ಏಕೆಂದರೆ ಸುತ್ತೂರು ಮಠ, ದೇವನೂರು ಮಠ ಹಾಗೂ ಮಲ್ಲನಮೂಲೆ ಮಠ ತ್ರಿವೇಣಿ ಸಂಗಮದಂತೆ. ಸುತ್ತೂರು ಶ್ರೀಕ್ಷೇತ್ರವು ವೀರಶೈವ ಲಿಂಗಾಯತ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಆದಿಜಗದ್ಗುರುಗಳವರ ಉತ್ಸವಮೂರ್ತಿಗೆ ಗ್ರಾಮಸ್ಥರು ನೀಡಿದ ಗೌರವ, ಭಕ್ತಿಯನ್ನು ಕಂಡು ಮನಸ್ಸಿಗೆ ಆನಂದವಾಯಿತು ಎಂದು ಹೇಳಿ ಭಗವಂತನ ಕೃಪೆ ಎಲ್ಲರ ಮೇಲಿರಲಿ ಎಂದು ನುಡಿದರು.

ವೀರಾಜಪೇಟೆ ತಾಲ್ಲೂಕಿನ ಶ್ರೀ ಸಲೀಲಾಖ್ಯ ಮಠ, ಬೆಟ್ಟದಪುರ ಹಾಗೂ ಕನ್ನಡ ಮಠದ ನಿ.ಪ್ರ.ಸ್ವ. ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ, ಶುಭ ಸಂದೇಶವನ್ನು ವಚನದ ಮೂಲಕ ಪ್ರಾರಂಭಿಸಿದರು. ಚುಂಚನಹಳ್ಳಿಯ ಗ್ರಾಮಸ್ಥರ ಪಾಲಿಗೆ ಇದು ಪುಣ್ಯದ ದಿನ. ಇಂದು ನಾವು ಷಟ್‌ಸ್ಥಲ ತತ್ವಾಚರಣೆಯನ್ನು ಬಿಂಬಿಸುವ ಧರ್ಮ ಧ್ವಜವನ್ನು ಹಾರಿಸಿದ್ದೇವೆ. ಷಟ್‌ಸ್ಥಲ ಎಂದರೆ ಒಂದು ಬೇಲಿ, ನಾವು ನಮ್ಮ ಸುತ್ತಮುತ್ತ ಒಂದು ಶುದ್ಧವಾದಂತಹ ಬೇಲಿಯನ್ನು ಹಾಕಿಕೊಳ್ಳಬೇಕು. ಅಷ್ಟಾವರ್ಣವೇ ಅಂಗವಾಗಿ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ನಮ್ಮ ರಕ್ಷಕವಾಗಿದ್ದು, ನಮ್ಮ ಬದುಕನ್ನು ಇವು ಸುಂದರವಾಗಿಸುವುದರಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಧರ್ಮದ ನೆಲೆಗಟ್ಟಿನಲ್ಲಿ ಸದ್ಗುಣಗಳನ್ನು ಸಾಕಾರಗೊಳಿಸಿಕೊಂಡಾಗ ಮನುಷ್ಯ ಸಾಧನೆ ಮಾಡಲು ಸಾಧ್ಯ. ದೇಹವೆಂಬುದು ಒಂದು ರಥದಹಾಗೆ ಎಂದು ನುಡಿದರು.



– ಬಿ.ಎಂ. ಅಮೂಲ್ಯ, ಎಂ. ಹರ್ಷಿತ

# ರೈತರು ದೇಶದ ಬೆನ್ನೆಲುಬು



**● ಶ್ರೀ ದಿನೇಶ್ ಆರ್ ಗುಂಡುರಾವ್**

ಕೃಷಿ ವಿಚಾರಸಂಕಿರಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ದಿನೇಶ್ ಆರ್ ಗುಂಡೂರಾವ್‌ರವರು ಮಾತನಾಡುತ್ತಾ ಶ್ರೀಮಠವು ಸಾಮಾಜಿಕ, ಧಾರ್ಮಿಕ ಮತ್ತು ದೇಸಿಯ ಕ್ರೀಡೆಗಳಂತಹ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಲ್ಲಿ ಅರಿವು ಮೂಡಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ. ನಾನು ಹಲವಾರು ವರ್ಷಗಳಿಂದ ಸತತವಾಗಿ ಸುತ್ತೂರು ಮಠದ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ಶ್ರೀಗಳವರು ನನ್ನ ಎಲ್ಲಾ ಕಾರ್ಯಗಳಿಗೂ ಬೆಂಬಲ ನೀಡಿ ನನ್ನನ್ನು ಪ್ರೇರೇಪಿಸುತ್ತಿದ್ದಾರೆ. ಕೃಷಿಕರಿಗೆ ಸರ್ಕಾರದಿಂದ ನಿರಂತರವಾಗಿ ಬೆಂಬಲ ಸಿಗುತ್ತಲೇ ಇದೆ. ಉಚಿತ ಗೊಬ್ಬರ, ಸಹಾಯಧನ, ಉತ್ತಮ ಮಾರುಕಟ್ಟೆ ವ್ಯವಸ್ಥೆ ಹಾಗೂ ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ, ಹನಿ ನೀರಾವರಿ, ಹೊಸ ತಂತ್ರಜ್ಞಾನದ ತರಬೇತಿ, ವಿಮೆ ಸೌಲಭ್ಯ, ರೈತರ ಸಂಕಷ್ಟ ಪರಿಹಾರ ಮಾಡುವ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನ ಅಗತ್ಯ. ರೈತರನ್ನು ಒಗ್ಗೂಡಿಸಿ ಕೃಷಿಯ ಬಗ್ಗೆ ಹೊಸ ವಿಚಾರಗಳನ್ನು ತಿಳಿಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನಿಸಬೇಕು.

ರೈತರು ದೇಶದ ಬೆನ್ನೆಲುಬು ಸರ್ಕಾರ ರೈತರಿಗೆ ಸಿಗಬೇಕಾದ ಸೌಲಭ್ಯಗಳನ್ನು ನೀಡಿದರೆ ರೈತರು ಗಟ್ಟಿಯಾಗುತ್ತಾರೆ ಕ್ರಮೇಣ ದೇಶವೂ ಕೂಡ ಗಟ್ಟಿಯಾಗುತ್ತದೆ. ರೈತರಿಗೆ ನೈತಿಕ ಬೆಂಬಲ ನೀಡಬೇಕು. ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುವ ಜಾತ್ರೆಯು ಕೇವಲ ಮನೋರಂಜನೆಗೆ ಸೀಮಿತವಾಗದೆ ರೈತರಿಗೆ ಉಪಯೋಗವಾಗುವ ಹಲವಾರು ಕಾರ್ಯಕ್ರಮಗಳನ್ನು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಅವಕಾಶ ಮಾಡಿಕೊಡಲಾಗಿದೆ. ನಮ್ಮ ಸಮಾಜ ಸೃಜನಶೀಲವಾಗಬೇಕು. ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು. ಹಿಂದೆ ಇದ್ದ ಸಂಸ್ಕೃತಿ ಚೆನ್ನಾಗಿತ್ತು, ಈಗ ಅದು ಕಲುಷಿತಗೊಂಡಿದೆ. ಧರ್ಮದ ಹೆಸರಿನಲ್ಲಿ ಹಿಂಸೆಯನ್ನು ಮಾಡಬಾರದು. ಪ್ರಚೋದನಾತ್ಮಕವಾದ ಕೆಲಸಗಳನ್ನು ಮಾಡಬಾರದು ಎಂದು ಹೇಳಿದರು.

– ಕೆ.ಎಸ್. ತೇಜಶ್ರೀ

# ಕೃಷಿ ಮೇಳದಲ್ಲಿ ವಿಶೇಷ ದೇಸಿ ತಳಿಗಳ ಹಸುಗಳು




**ಸು**ತ್ತೂರು ಜಾತ್ರಾ ಮಹೋತ್ಸವ ಅಂಗವಾಗಿ ಆಯೋಜಿಸಿರುವ ಕೃಷಿ ಮೇಳದಲ್ಲಿ ದೇಸಿ ಹಸು ತಳಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಭಾರತವು ವೈವಿಧ್ಯಮಯ, ವಿಶಿಷ್ಟ ಹಸು, ಎಮ್ಮೆ ತಳಿಗಳ ತವರೂರು. ಅನಾದಿ ಕಾಲದಿಂದಲೂ ಭಾರತೀಯರು ಹಸುಗಳಿಗೆ ಪೂಜನೀಯ ಸ್ಥಾನವನ್ನು ನೀಡಿದ್ದಾರೆ. ದೇಸಿ ಹಸುಗಳಲ್ಲಿ ಮುಕ್ಕೋಟಿ ದೇವತೆಗಳು ನೆಲೆಸಿರುತ್ತಾರೆ ಎಂದು ಹಿಂದುಗಳ ನಂಬಿಕೆಯಾಗಿದೆ. ಇದಕ್ಕೆ ಸಾಕ್ಷಿಯೆಂಬಂತೆ ದೇಸಿ ಹಸುಗಳ ಉತ್ಪನ್ನಗಳಲ್ಲಿ ಔಷಧೀಯ ಗುಣಗಳಿದ್ದು, ಅನೇಕ ಕಾಯಿಲೆಗಳಿಗೆ ಇದು ಮದ್ದಾಗಿವೆ. ಆದರೆ ಇತೀಚಿನ ದಿನಗಳಲ್ಲಿ ದೇಸಿ ಹಸುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ದೇಸಿ ಹಸುಗಳನ್ನು ಸಂರಕ್ಷಿಸುವುದು ಮತ್ತು ಅಭಿವೃದ್ಧಿಪಡಿಸುವುದರ ಬಗ್ಗೆ ರೈತರಿಗೆ ಅರಿವು ಮೂಡಿಸಲು ದೇಸಿ ಹಸು ತಳಿಗಳ ಕೊಟ್ಟಿಗೆಯನ್ನು ಕೃಷಿ ಮೇಳದ ಒಂದು ಭಾಗದಲ್ಲಿ ನಿರ್ಮಿಸಲಾಗಿದೆ.

ಗಿರ್ ಎಂಬ ತಳಿಯು ಗುಜರಾತ್ ರಾಜ್ಯದ ಮೂಲವಾಗಿದ್ದು, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತವೆ. ಈ ತಳಿಯನ್ನು ಭದವಾರಿ, ದೇಸನ್, ಗುಜರಾತಿ, ಕತಿಯಾವಾರಿ, ಸಾರ್ತಿ ಮತ್ತು ಸುರತಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಇದರ ಕೊಂಬುಗಳು ವಿಶಿಷ್ಟವಾಗಿಬಾಗಿದ್ದು ಅರ್ಧ ಚಂದ್ರ ಆಕಾರದಲ್ಲಿ ಕಾಣುತ್ತವೆ. ಇದು ಪ್ರತಿ ಸೂಲಿಗೆ 1200 ರಿಂದ 1800 ಲೀಟರ್ ಹಾಲಿನ ಇಳುವರಿಯನ್ನು ನೀಡುತ್ತದೆ. ಈ ತಳಿಯು ಅದರ ಸಹಿಷ್ಣುತೆ







ಮತ್ತು ರೋಗ ನಿರೋಧಕ ಶಕ್ತಿಗೆ ಹೆಸರುವಾಸಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಸುಳ್ಯದ ಶ್ರೀ ದಿನಕರ್‌ರವರು ಈ ಹಸುವನ್ನು ಶ್ರೀಮಠಕ್ಕೆ ದಾನವಾಗಿ ನೀಡಿದ್ದಾರೆ.

ಸಾಹಿವಾಲ್ ಎಂಬ ತಳಿಯು ಅವಿಭಜಿತ ಭಾರತದ ಮಾಂಟ್ಗೊಮೆರಿ ಪ್ರದೇಶದ್ದಾಗಿದ್ದು ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದನ್ನು ಲೋಲಾ, ಲ್ಯಾಂಬಿ ಬಾರ್, ಮೊಂಟ್ಗೊಮೆರಿ, ಮುಲ್ಟಾನಿ, ಟೆಲಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಇದು ಪ್ರತಿ ಸೂಲಿಗೆ 1400 ರಿಂದ 2500 ಲೀಟರ್ ಹಾಲಿನ ಇಳುವರಿಯನ್ನು ನೀಡುತ್ತದೆ ಮತ್ತು ಅತ್ಯುತ್ತಮ ದೇಸಿ ಡೈರಿ ತಳಿ ಎಂದೇ ಹೆಸರುವಾಸಿಯಾಗಿದೆ. ಈ ತಳಿಯನ್ನು ದೇವಲಾಪುರ ಗ್ರಾಮದವರಾದ ಶ್ರೀ ಲಿಂಗಣ್ಣ ಬಿನ್ ಶಿವಣ್ಣನವರು ಶ್ರೀಮಠಕ್ಕೆ ದಾನವಾಗಿ ನೀಡಿದ್ದಾರೆ. ಹಳ್ಳಿಕಾರ್ ಎಂಬ ತಳಿಯು ಪ್ರಾಚೀನ ಕರ್ನಾಟಕದ ವಿಜಯನಗರ ಮೂಲದಾಗಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉದ್ದವಾದ ಕೊಂಬುಗಳು, ಅಗಲವಾದ ಹಣೆ, ಬಲವಾದ ಕಾಲುಗಳು ಮತ್ತು ಸ್ನಾಯುಗಳು ಇದರ ದೇಹ ಲಕ್ಷಣಗಳಾಗಿರುತ್ತವೆ. ಹಾಲಿನ ಇಳುವರಿ ಅಲ್ಪವಾಗಿರುವುದು ವಿಶಿಷ್ಟ ದೇಹ ರಚನೆಯಿಂದಾಗಿ ಈ ತಳಿಯು ಬೇಸಾಯಕ್ಕೆ ಅತ್ಯಂತ ಹೆಸರುವಾಸಿಯಾಗಿದೆ. ಈ ತಳಿಯನ್ನು ಕುಪ್ಪರವಳ್ಳಿ ಗ್ರಾಮದವರಾದ ಶ್ರೀ ಸೋಮಣ್ಣ ಬಿನ್ ಕೊಂಗಳ್ಳಿಗೌಡರವರು ಶ್ರೀಮಠಕ್ಕೆ ದಾನವಾಗಿ ನೀಡಿದ್ದಾರೆ. ಹೀಗೆ ಹಲವಾರು ಹಸು ತಳಿಗಳಲ್ಲಿ ರೆಡ್ ಸಿಂಧಿ, ಖಿಲಾರಿ, ದೇವಣಿ, ಓಂಗೋಲ್, ಮಲೆನಾಡು ಗಿಡ್ಡ ಕಾಣಬಹುದಾಗಿದೆ. ಜಾತ್ರೆಯ ನಂತರವೂ ಈ ದೇಸಿ ಹಸು ತಳಿಗಳನ್ನು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕಾಣಬಹುದಾಗಿದೆ. –ಡಿ.ಎನ್. ಶುಭಶ್ರೀ






ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಹಗ್ಗ–ಜಗ್ಗಾಟ ಸ್ಪರ್ಧೆಯಲ್ಲಿ ನಾವು ಯಾರಿಗೇನೂ ಕಡಿಮೆ ಎಂದು ಹಗ್ಗ ಎಳೆದಾಟದಲ್ಲಿರುವ ಮಹಿಳೆಯರು

## ‘ಅರಣ್ಯ ನಾಶ- ಪ್ರಗತಿಗೆ ಪಾಶ’

● ಡಾ. ಸಿ. ಸೋಮಶೇಖರ



ಕೃಷಿ ವಿಚಾರಸಂಕಿರಣದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ನಿವೃತ್ತ ಐ.ಎ.ಎಸ್ ಅಧಿಕಾರಿಗಳಾದ ಡಾ.ಸಿ. ಸೋಮಶೇಖರ್‌ರವರು ಮಾತನಾಡಿ ಸುತ್ತೂರು ಶ್ರೀಕ್ಷೇತ್ರವು ಧರ್ಮ, ವಿಜ್ಞಾನ ಹಾಗೂ ಸಮಾಜ ಸೇವೆಯ ತ್ರಿವೇಣಿ ಸಂಗಮವಾಗಿದೆ. ರೈತರ ಬೆಳೆಗಳಿಗೆ ಸರಿಯಾದ ಮಾರುಕಟ್ಟೆ ಹಾಗೂ ಬೆಂಬಲ ಬೆಲೆ ದೊರಕದೆ ದಲ್ಲಾಳಿಗಳಿಂದ ನಿರಂತರ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಇಂದಿನ ಹವಾಮಾನ ವೈಪರಿತ್ಯಕ್ಕೆ ಮಾನವನ ದುರಾಸೆಯೇ ಮೂಲ ಕಾರಣವಾಗಿದೆ. ಅರಣ್ಯನಾಶದಂತಹ ದುಷ್ಕೃತ್ಯಗಳು ಪ್ರಕೃತಿಯನ್ನು ಅಲ್ಲೋಲ–ಕಲ್ಲೋಲಗೊಳಿಸಿವೆ. ‘ಕೋಟಿ ವಿದ್ಯೆಯಲ್ಲಿ ಮೇಟಿ ವಿದ್ಯೆಯೇ ಮೇಲು’ ಎಂಬ ನಾಣ್ಣುಡಿ ಇದ್ದರೂ ಇಂದಿನ ರೈತಾಪಿ ವರ್ಗವು ಕಷ್ಟದ ಬದುಕನ್ನು ಸಾಗಿಸುತ್ತಿದ್ದಾರೆ. ವ್ಯವಸಾಯಕ್ಕೆ ನೀರನ್ನು ಪಡೆಯಲು ರೈತ ಕಣ್ಣೀರು ಸುರಿಸುತ್ತಿದ್ದಾನೆ ಎಂದು ಹೇಳಿದ ಅವರು ಸುತ್ತೂರು ಜಾತ್ರೆಯನ್ನು ಧರ್ಮ, ವಿಜ್ಞಾನ, ಕಲೆ ಹಾಗೂ ಸಂಸ್ಕೃತಿಯಂತಹ ವಿಶಿಷ್ಟ ಕ್ಷೇತ್ರಗಳಿಗೆ ವಿಸ್ತರಿಸಿದ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಹತ್ಕಾರ್ಯವನ್ನು ಸ್ಮರಿಸಿದರು.–ಜೆ.ಎನ್. ಕುಮಾರ್

## ‘ಮಾಡಿಸಿರಣ್ಣ ಮಣ್ಣು ಪರೀಕ್ಷೆ’



ಕೃಷಿ ವಿಚಾರಸಂಕಿರಣ ಉದ್ಘಾಟನಾ ಸಮಾರಂಭದ ಸಮ್ಮುಖ ವಹಿಸಿ ಶುಭಸಂದೇಶ ನೀಡಿದ ಕನಕಪುರ ಶ್ರೀದೇಗುಲ ಮಠದ ನಿ.ಪ್ರ.ಸ್ವ ಡಾ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಸರ್ಕಾರಗಳು ಕೃಷಿಗೆ ಬಹಳಷ್ಟು ಪ್ರಾಮುಖ್ಯತೆಯನ್ನು ನೀಡುತ್ತಿವೆ. ಆದರೂ ರೈತರಿಗೆ ಹೆಚ್ಚಿನ ರೀತಿಯಲ್ಲಿ ಉಪಯೋಗವಾಗುವಂತಹ ಯೋಜನೆಗಳು ಕಂಡುಬರುತ್ತಿಲ್ಲವೆಂದು ಅಭಿಪ್ರಾಯಪಟ್ಟರು. ಭೂಮಿ ಬರಡಾದಾಗ ಮಣ್ಣಿನ ಪರೀಕ್ಷೆಯನ್ನು ಮಾಡಿಸಬೇಕು. ಮಣ್ಣಿಗೆ ಬೇಕಾದ ಉಪಯುಕ್ತ ಅಂಶಗಳನ್ನು ಸೇರ್ಪಡಿಸಿದಾಗ ಇಳುವರಿ ಚೆನ್ನಾಗಿ ಬರುತ್ತದೆ. ಉತ್ತಮ ಬೆಳೆಯನ್ನು ಬೆಳೆಯಬೇಕಾದರೆ ಕೃಷಿಕರು ಜಾಗೃತೆಯಿಂದ ಕಾರ್ಯ ನಿರ್ವಹಿಸಬೇಕು. ನಾಟಿ ಮಾಡಿ ಗೊಬ್ಬರ ಹಾಕಿ ಬೆಳೆ ಬೆಳೆದು ಕಳೆ ಬಂದಾಗ ನಾಶಮಾಡಬೇಕು. ಕೃಷಿ ತಜ್ಞರಿಂದ ಕೃಷಿಗೆ ಸಂಬಂಧಿಸಿದಂತೆ ಹೆಚ್ಚಿನ ಸಲಹೆ ಸೂಚನೆಗಳನ್ನು ರೈತರು ಪಡೆಯುವುದು ಬಹಳ ಮುಖ್ಯ. ವ್ಯವಸಾಯ ಬಹಳಷ್ಟು ಬದಲಾವಣೆಯಾಗಿ ಆಧುನಿಕ ಬೇಸಾಯ ಪದ್ಧತಿಯಿಂದ ಅಲ್ಪಾವಧಿಯಲ್ಲಿ ಉತ್ತಮ ಬೆಳೆ ಪಡೆಯಲು ಹಲವಾರು ಯೋಜನೆಗಳಿವೆ ಇದನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು. ತಂತ್ರಜ್ಞಾನವು ಮುಂದುವರೆದಿರುವುದರಿಂದ ಯಂತ್ರಗಳನ್ನು ಬಳಸಿ ಉನ್ನತ ಬೆಳೆಯನ್ನು ಬೆಳೆಯಿರಿ ಎಂದು ಸಲಹೆ ನೀಡಿದರು. –ಮಂದಾರ ಶ್ರೀನಿವಾಸ್




### 5 ಫೆಬ್ರವರಿ 2019 ಮಂಗಳವಾರ * ಗದ್ದುಗೆ ಆವರಣ

**ಬೆಳಗ್ಗೆ 8.00 : ನಾದಸ್ವರ**

**9.00 : ನಗುವೆ ಜೀವನ ಸಾಕ್ಷಾತ್ಕಾರ : ಶ್ರೀಮತಿ ಸುಧಾ ಬರಗೂರು,** ಬೆಂಗಳೂರು

**ಮಧ್ಯಾಹ್ನ 2.00 : ಜನಪದ ಗೀತೆಗಳು : ಶ್ರೀ ಸಿದ್ದಪ್ಪ ಸಾಬಣ್ಣ** ಬಿದರಿ, ಬಾಗಲಕೋಟೆ

**ಸಂಜೆ 6.30 : ವಿಶೇಷ ಸಂಗೀತ ಕಾರ್ಯಕ್ರಮ : ನಾದಲೋಕ : ಡಾ. ಮೈಸೂರು ಮಂಜುನಾಥ್ ಹಾಗೂ ಶ್ರೀ ರಫೀಕ್ ಖಾನ್ ಮತ್ತು ತಂಡ**

### ವಸ್ತು ಪ್ರದರ್ಶನ ಆವರಣ

**ರಾತ್ರಿ 7.00 : ನಾಟಕ : ಕಾನೂನು ಸೇವೆಗಳ ಬಗ್ಗೆ ಅರಿವು :** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು

### ಗದ್ದುಗೆ ಆವರಣ

**8.30 : ಜಾನಪದವೇ ಸತ್ಯ, ಜಾನಪದವೇ ನಿತ್ಯ : 'ಇನಿದನಿ' ಮಣ್ಣಮಕ್ಕಳ ಹೊನ್ನಪದಗಳ ಬಳಗ, ಮೈಸೂರು.**

## ಜಾತ್ರೆಯೊಳಗೊಂದು ಸುತ್ತು...

### ಬದುಕಿರುವವರೆಗೂ ಬರುವೆ



ನಾನು 10 ವರ್ಷಗಳಿಂದ ಈ ಜಾತ್ರೆಗೆ ಬರುತ್ತಿದ್ದು, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ವಾಗಿರುವ ಜಾತ್ರೆಯನ್ನು ಕಾಣುತ್ತಿರುವುದು ನನ್ನ ಪುಣ್ಯ. ಇದನ್ನೇ ತೀರ್ಥಯಾತ್ರೆಯೆಂದು ಭಾವಿಸುತ್ತಾ, ಬದುಕಿರುವವರೆಗೂ ಈ ಜಾತ್ರೆಗೆ ಬರುತ್ತೇನೆ. ಇಲ್ಲಿನ ಶ್ರೀಗಳು ಕಾಮಧೇನುವಿನಂತೆ ಎಲ್ಲರಿಗೂ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ.

– **ಶ್ರೀಮತಿ ಪಾರ್ವತಮ್ಮ,** ಮಂಡ್ಯ

### ಸಂಬಂಧಗಳನ್ನು ಬೆಸೆಯುವ ಜಾತ್ರೆ



ಸುತ್ತೂರು ಜಾತ್ರೆಯು ಪ್ರತಿಯೊಬ್ಬರು ನೋಡಲೇಬೇಕಾದ ಜಾತ್ರೆಯಾಗಿದೆ. ಸರ್ವರ ದೃಷ್ಟಿಯಿಂದ ಇಲ್ಲಿ ಏರ್ಪಡಿಸಿರುವ ಸ್ಪರ್ಧೆಗಳು ಹಾಗೂ ಕಾರ್ಯಕ್ರಮಗಳು ರೈತರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಯಾತ್ರಾರ್ಥಿಗಳಿಗೆ ಸಹಾಯಕವಾಗಿವೆ. ಈ ಕ್ಷೇತ್ರವು ವಿವಿಧ ಧರ್ಮಗಳ ನಡುವೆ ಸಾಮರಸ್ಯವನ್ನು ಮೂಡಿಸುತ್ತಿದ್ದು, ಸ್ವಚ್ಛತೆ ಹಾಗೂ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

– **ಶ್ರೀ ದೊಡ್ಡಗೌಡ,** ಕೃಷ್ಣರಾಜನಗರ. (ಜೆ.ಎನ್. ಕುಮಾರ)

### ಸಾಮೂಹಿಕ ವಿವಾಹ ನೋಡಿ ಅಚ್ಚರಿಗೊಂಡೆವು



ನಾವು ಆಸ್ಟ್ರೇಲಿಯ ದೇಶದವರು. ನಮಗೆ ಸುತ್ತೂರು ಜಾತ್ರಾ ಮಹೋತ್ಸವದ ಬಗ್ಗೆ ಪತ್ರಿಕೆಯ ಮೂಲಕ ತಿಳಿಯಿತು. ಆದ್ದರಿಂದ ನಾವು ಬಹಳ ಕುತೂಹಲದಿಂದ ವೀಕ್ಷಿಸಲು ಬಂದಿದ್ದೇವೆ. ಇದೇ ಮೊದಲ ಬಾರಿಗೆ ನಾವು ಬಂದಿದ್ದು, ಈ ಜಾತ್ರಾ ಮಹೋತ್ಸವವನ್ನು ನೋಡಿ ಬಹಳ ಸಂತೋಷವಾಗಿದೆ. ನಾವು 3 ವರ್ಷಗಳಿಂದ ಮೈಸೂರಿನಲ್ಲಿ ಕರಕುಶಲಕರ್ಮಿಗಳ ಸ್ವಯಂಸೇವಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಜನರಿಗೆ ಕರಕುಶಲತೆಯ ಬಗ್ಗೆ ಅರಿವು ಮತ್ತು ಉತ್ತೇಜನ ಮೂಡಿಸುತ್ತಿದ್ದೇವೆ. ನಾವು ಇಷ್ಟು ಮಂದಿ ಜೋಡಿಗಳ ವಿವಾಹವನ್ನು ಎಲ್ಲೂ ನೋಡಿಲ್ಲ. ಈ ತರಹದ ಸಾಮೂಹಿಕ ವಿವಾಹವನ್ನು ಸುತ್ತೂರಿನಲ್ಲಿ ಮೊದಲ ಬಾರಿ ನೋಡಿ ಅಚ್ಚರಿಯಾಯಿತು ಹಾಗೂ ಇಲ್ಲಿನ ಭಾರತೀಯ ಸಂಪ್ರದಾಯದ ವಿವಾಹವು ನಮಗೆ ಬಹಳ ಇಷ್ಟವಾಯಿತು.– **ಶ್ರೀಮತಿ ಕ್ಯಾಥರೀನ್,** ಆಸ್ಟ್ರೇಲಿಯ

(ಸಿ.ಕೆ. ಸುನಿತ, ತೇಜ)




**ಜಾತ್ರಾ ಮಹೋತ್ಸವದ ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಉಡುಪಿಯ ಪೇಜಾವರ ಶ್ರೀಗಳು ಆಶೀರ್ವಚನ ನೀಡಿದರು. ಚಿತ್ರದಲ್ಲಿ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಶ್ರೀ ಎಸ್. ರುದ್ರೇಗೌಡ, ಶ್ರೀ ಬಸವ ಮರಳಸಿದ್ಧ ಸ್ವಾಮಿಗಳು, ಬ್ರಹ್ಮಕುಮಾರಿ ಲಕ್ಷ್ಮೀಜಿ, ಶ್ರೀ ಶಿವಕುಮಾರ್, ಶ್ರೀ ಬಾಲರಾಜ್ ಶ್ರೀ ಬಸವರಾಜು ನಾವಿ, ಡಾ. ಎಂ.ಜೆ. ಚಂದ್ರೇಗೌಡರವರಿದ್ದಾರೆ.**

# ರೈತರು ದುಡಿಮೆಯಲ್ಲೇ ದೇವರನ್ನು ಕಾಣುವರು

ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭದ ಸಮ್ಮುಖ ವಹಿಸಿದ್ದ ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬ್ರಹ್ಮಕುಮಾರಿ ಲಕ್ಷ್ಮೀಜಿ ರವರು ಮಾತನಾಡಿ ರೈತರು ಈ ದೇಶದ ಬೆನ್ನೆಲುಬು, ಜೀವನದಲ್ಲಿ ಕಷ್ಟ ಮತ್ತು ಸುಖ ಬರುತ್ತವೆ ಇದನೆಲ್ಲವನ್ನು ಲೆಕ್ಕಿಸದೆ ರೈತನು ತನ್ನ ದುಡಿಮೆಯನ್ನು ಮಾಡುತ್ತಾನೆ. ರೈತರು ದುಡಿಮೆಯಲ್ಲೇ ದೇವರನ್ನು ಕಾಣುವರು, ರೈತರ ಆತ್ಮಹತ್ಯೆ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಇದಕ್ಕೆ ಕಾರಣ ಬೆಳೆಗೆ ಬೆಂಬಲ ಬೆಲೆ ಇಲ್ಲದಿರುವುದು, ರೈತರು

**● ಬ್ರಹ್ಮಕುಮಾರಿ ಲಕ್ಷ್ಮೀಜಿ**

ತಮ್ಮ ಮನಸ್ಸನ್ನು ಆಂತರಿಕ ಹಾಗೂ ಬಾಹ್ಯವಾಗಿ ಸದೃಢಗೊಳಿಸಿಕೊಳ್ಳಬೇಕು. ಮಾನವರು ತಾಳ್ಮೆ, ಧೈರ್ಯ–ಸ್ಥೈರ್ಯಗಳನ್ನು ಬೆಳೆಸಿಕೊಳ್ಳಬೇಕು ಇದರಿಂದ ಏನಾದರೂ ಸಾಧನೆ ಮಾಡಬಲ್ಲರು. ಭಗವಂತನನ್ನು ಎಲ್ಲೋ ಹುಡುಕುವ ಬದಲು ನಾವು ಮಾಡುವ ಕೆಲಸದಲ್ಲಿ ಕಾಣಬೇಕು. ರೈತರ ಜೀವನ ಶ್ರೀಮಂತ ಜೀವನವಾಗಬೇಕೆಂದು ಅಭಿಪ್ರಾಯಪಟ್ಟರು.

–ತೇಜ



**ಸೋಮವಾರ ಸಂಜೆ ಲಕ್ಷ ದಿಪೋತ್ಸವದ ಸಂದರ್ಭದಲ್ಲಿ ಜಗದ್ಗುರುಗಳವರೊಂದಿಗೆ ಶಿವಮೊಗ್ಗದ ಶ್ರೀ ಜಡೇ ಸ್ವಾಮಿಗಳವರು, ಬೆಕ್ಕಿನ ಕಲ್ಮಠದ ಶ್ರೀಗಳು, ಚುಂಚನಹಳ್ಳಿ ಶ್ರೀಗಳು ಶ್ರೀ ರುದ್ರೇಗೌಡರು, ಶ್ರೀ ಎಸ್.ಪಿ. ಮಂಜುನಾಥರವರು ಮೊದಲಾದವರಿದ್ದಾರೆ.**

## ಸಂಪನ್ಮೂಲಗಳನ್ನು ಮಿತವಾಗಿ ಬಳಸಬೇಕು



ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ರುದ್ರೇಗೌಡರವರು ಮಾತನಾಡಿ ಹವಾಮಾನ ವೈಪರಿತ್ಯದಿಂದಾಗಿ ವಾತಾವರಣದಲ್ಲಿ ಅನಿರೀಕ್ಷಿತ ಬದಲಾವಣೆಗಳು ಉಂಟಾಗುತ್ತಿದೆ. ಇದರಿಂದ ಅನೇಕ ಸಮಸ್ಯೆಗಳು ಉದ್ಭವವಾಗುತ್ತಿವೆ. ಪ್ರಾಕೃತಿಕ ಸಂಪನ್ಮೂಲಗಳಾದ ನೀರು, ಅರಣ್ಯ, ಖನಿಜ ಸಂಪನ್ಮೂಲಗಳನ್ನು ಮಿತವಾಗಿ ಬಳಸಬೇಕು ನಮ್ಮ ಅಮೂಲ್ಯವಾದ ವನ್ಯ ಸಂಪತ್ತು ಕ್ಷೀಣಿಸುತ್ತಿದೆ. ಅರಣ್ಯದಲ್ಲಿ ಹೇರಳವಾಗಿ ದೊರೆಯುತ್ತಿದ್ದ ಶ್ರೀಗಂಧದ ಮರಗಳು ಕಡಿಮೆಯಾಗುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. –ಎಸ್. ಸೋಮೇಶ್

**ಅಡುಗೆ ಸ್ಪರ್ಧೆ–** ದಿನಾಂಕ 05.02.2019 ರಂದು ಬೆಳಗ್ಗೆ 10:00 ಗಂಟೆಗೆ ವಸ್ತು ಪ್ರದರ್ಶದ ಆವರಣದಲ್ಲಿ ರಂಗೋಲಿ ಸ್ಪರ್ಧೆ ನಡೆದ ಸ್ಥಳದಲ್ಲಿ ಸಿರಿಧಾನ್ಯಗಳ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದೆ. ತದನಂತರ ಗ್ಯಾಸ್ ಸುರಕ್ಷತೆಯ ಬಗ್ಗೆ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿದೆ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸಂಚಾಲಕರಾದ ಶ್ರೀಮತಿ ಜಮುನಾ ಅರಸ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನಮನಸೆಳೆದ ವಚನ ಗಾಯನ



ಜಾತ್ರಾ ಮಹೋತ್ಸವದ ಅಂಗವಾಗಿ ಗದ್ದುಗೆ ಆವರಣದಲ್ಲಿ ಸೋಮವಾರ ಬೆಳಗ್ಗೆ 9.00 ಗಂಟೆಗೆ ಮೈಸೂರಿನ ಗಾನಸಿರಿ ಕಲಾವೃಂದ ಇವರಿಂದ ಭಕ್ತಿಗೀತೆ, ಭಾವಗೀತೆ ಹಾಗೂ ವಚನ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸುಮಾರು 20 ವರ್ಷಗಳಿಂದಲೂ ತಮ್ಮ ಸಿರಿಕಂಠದ ಮೂಲಕ ಜನರನ್ನು ರಂಜಿಸುತ್ತಾ ಬಂದಿರುವ ಈ ತಂಡದವರು ಮೈಸೂರಿನ ವಿಶ್ವೇಶ್ವರನಗರದಲ್ಲಿ ನೆಲೆಸಿದ್ದಾರೆ. ಈ ಕಲಾ ವೃಂದವು ಮೈಸೂರು ಆಕಾಶವಾಣಿ, ದೂರದರ್ಶನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದು, ಈ ತಂಡದ ನೇತೃತ್ವವನ್ನು ಶ್ರೀ ಎಂ. ಯಶವಂತ್‌ಕುಮಾರ್ ಮತ್ತು ಶ್ರೀಮತಿ ಇಂದ್ರಾಣಿ ಅನಂತಕುಮಾರ್ ವಹಿಸಿಕೊಂಡಿದ್ದಾರೆ. ಇವರು ಕಳೆದ 8 ವರ್ಷಗಳಿಂದ ಜಾತ್ರಾ ಮಹೋತ್ಸವದಲ್ಲಿ ಭಾವಹಿಸಿ, ತಮ್ಮ ಗಾಯನದ ಮೂಲಕ ಜನರನ್ನು ರಂಜಿಸುತ್ತಿದ್ದಾರೆ. ಇವರ ಜೊತೆಯಲ್ಲಿ ಕೀಬೋರ್ಡ್–ಶ್ರೀ ಬಾಲಕೃಷ್ಣ, ತಬಲ ಶ್ರೀ ಇಂದುಶೇಖರ್, ರಿದಂಪ್ಯಾಡ್ ಶ್ರೀ ಜಗದೀಶ್ ಅವರುಗಳು ಕಾರ್ಯಕ್ರಮದಲ್ಲಿ ಸಾತ್ ನೀಡಿದರು. ಈ ಕಾರ್ಯಕ್ರಮವು ಭಕ್ತಾದಿಗಳನ್ನು ಆಕರ್ಷಿಸುವುದರ ಮೂಲಕ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

– ಶುಭಶ್ರೀ

# ಭಜನಾ ಮೇಳ ಬಹುಮಾನ ಬಹಳ

ಮಕ್ಕಳ ಭಜನಾ ಮಂಡಳಿ ಸ್ಪರ್ಧೆಯಲ್ಲಿ ಬೆಳಗಾಂ ಜಿಲ್ಲೆಯ ಮಲ್ಲಮ್ಮನ ಬೆಳವಾಡಿಯ ಕು॥ ಸೋಮೇಶ ಬಸಯ್ಯ ವಿರಕ್ತ ಮಠದ ಮಕ್ಕಳ ಭಜನಾ ತಂಡ ಮಂತ್ರ ಮುಗ್ಧ ಭಜನೆಯ ಪ್ರಥಮ ಬಹುಮಾನವನ್ನು ಪಡೆದರೆ, ಮೈಸೂರಿನ ಅಮೃತ ವಿದ್ಯಾಲಯದ ಮಕ್ಕಳ ಭಜನಾ ತಂಡ ಉತ್ತಮವಾಗಿ ಭಜನೆಯನ್ನು ಹಾಡುವ ಮೂಲಕ ಎರಡನೇ ಬಹುಮಾನ ಪಡೆಯಿತು. ಬೆಳಗಾಂ ಜಿಲ್ಲೆ ಚಿಕ್ಕಬೆಳ್ಳಿ ಕಟ್ಟೆಯ ಶ್ರೀ ಶರಣ ಸಂಗಮ ಮಕ್ಕಳ ಭಜನಾ ತಂಡ ಮೂರನೇ ಬಹುಮಾನ ಹಾಗೂ ಶ್ರೀ ಬಸವಪ್ರಿಯ ಮಕ್ಕಳ ಭಜನಾ ತಂಡ ನಾಲ್ಕನೇ ಬಹುಮಾನವನ್ನು ತಮ್ಮದೇ ಶೈಲಿಯಲ್ಲಿ ಹಾಡಿ ಗಳಿಸಿಕೊಂಡರೆ, ಮಂಡಳಿ ಕೇಳುಗರನ್ನು ಮನದಲ್ಲೇ ಕುಣಿಸುತ್ತಾ ಪ್ರಥಮ ಬಹುಮಾನವನ್ನು ಪಡೆದರೆ. ಕೆ.ಆರ್. ನಗರ ತಾಲ್ಲೂಕಿನ ಸಾಲಿಗ್ರಾಮದ ಶ್ರೀ ಶಾರದ ಸಂಗೀತ ಶಾಲಾ ಕಲಾ ತಂಡ ತಮ್ಮ ಕಂಠಸಿರಿಯಿಂದ ಎರಡನೇ ಬಹುಮಾನವನ್ನು ಪಡೆಯುವಲ್ಲಿ ಯಶಸ್ವಿಯಾಯಿತು, ಸೋಮವಾರಪೇಟೆಯ ಗುಮ್ಮನಕೊಲ್ಲೆಯ ಕದಳಿ ವೇದಿಕೆ ಸಂಘವು ಮೂರನೇ ಬಹುಮಾನವನ್ನು ಭಜನೆಯ ಸುಂದರ ವಾತಾವರಣ ಸೃಷ್ಟಿಸಿ ಪಡೆಯಿತು, ಚಾಮರಾಜನಗರ ತಾಲ್ಲೂಕಿನ ಉಡಿಗಾಲದ ಶರಣೆ ನೀಲಾಂಬಿಕೆ ಮಹಿಳಾ ಭಜನಾ ಸಂಘ ನಾಲ್ಕನೇ ಬಹುಮಾನವನ್ನು ಹಾಗೂ ಶಿವಮೊಗ್ಗದ ತೀರ್ಥಹಳ್ಳಿಯ




ಮೈಸೂರಿನ ಅಮೃತ ವಿದ್ಯಾಲಯದ ಮಕ್ಕಳ ಭಜನಾ ತಂಡ ಐದನೇ ಬಹುಮಾನವನ್ನು ಪಡೆದು ಭಜನೆ ಮುಂದುವರೆಸಿತು.

ಮಹಿಳೆಯರ ಭಜನೆ (ನಗರ ವಿಭಾಗ) ಸ್ಪರ್ಧೆಯಲ್ಲಿ ಮೈಸೂರಿನ ಬೋಗಾದಿಯ ಶ್ರೀಮತಿ ಎಂ.ಪಿ. ನೀಲಾಂಬಿಕಾ ದೇವಿ ಕೋಂ ನಾಗರಾಜು ಮಹಿಳಾ ಭಜನಾ ಸಂಘ ಪ್ರಥಮ ಬಹುಮಾನವನ್ನು ಬಹಳ ಸುಶ್ರಾವ್ಯವಾಗಿ ಹಾಡುತ್ತಾ ಪಡೆದರೆ, ರಾಮಕೃಷ್ಣನಗರದ ವೇದವ್ಯಾಸ ಭಜನಾ ಮಂಡಳಿ ಪೇಕ್ಷಕರು ಭಜನೆಯನ್ನು ಗುನುಗುವಂತೆ ಮಾಡಿ ಎರಡನೇ ಬಹುಮಾನವನ್ನು ಪಡೆಯಿತು. ರಾಮಕೃಷ್ಣನಗರದ ಸ್ವರಾಂಜಲಿ ಸಂಗೀತ ಕೇಂದ್ರ್ರದ ಭಜನಾ ಸಂಘದವರು ಸುಮಧುರವಾಗಿ ಹಾಡುವ ಮೂಲಕ ಮೂರನೇ ಬಹುಮಾನವನ್ನು ಎತ್ತಿ ಹಿಡಿದರೆ, ದಾವಣಗೆರೆಯ ಶ್ರೀ ಶಾಂತವೀರ ಸ್ವಾಮಿ ಭಜನಾ ತಂಡ ನಾಲ್ಕನೇ ಬಹುಮಾನವನ್ನು ಅರ್ಥಪೂರ್ಣ ವಾದ ಭಜನೆಗಳನ್ನು ಹಾಡುವ ಮೂಲಕ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಮೈಸೂರಿನ ಬೋಗಾದಿಯ ಶ್ರೀಮತಿ ಎಸ್. ಹೇಮಲತಾ ಮತ್ತು ತಂಡ ಐದನೇ ಬಹುಮಾನವನ್ನು ಉತ್ತಮ ಕಾರ್ಯಕ್ರಮ ನಡೆಸಿಕೊಡುವ ಮೂಲಕ ಪಡೆದುಕೊಂಡಿತು.

ಮಹಿಳೆಯರ ಭಜನೆ (ಗ್ರಾಮೀಣ ವಿಭಾಗ) ಸ್ಪರ್ಧೆಯಲ್ಲಿ ಬಾಗಲಕೋಟೆಯ ಭಂಟನೂರಿನ ಶ್ರೀರಾಮರೂಢ ಭಜನಾ ಶ್ರೀಹರಿ ಭಜನಾ ಮಂಡಳಿ ತಂಡ ಎಲ್ಲರ ಕಿವಿಗಳನ್ನು ಇಂಪಾಗಿಸುವ ಮೂಲಕ ಐದನೇ ಬಹುಮಾನವನ್ನು ಪಡೆದುಕೊಂಡರು. ಸಮಾಧಾನಕರ ಬಹುಮಾನಗಳನ್ನು ಬಾಗಲಕೋಟೆ ಜಿಲ್ಲೆ ಚಿತ್ರಭಾನುಕೋಟೆಯ ಶ್ರೀ ಶಿವಶಕ್ತಿ ಮಹಿಳಾ ಭಜನಾ ತಂಡ, ಜಂಬಗಿಯ ಮಹಿಳೆಯರ ಭಜನಾ ಸಂಘ, ಸೋಮವಾರ ಪೇಟೆ ತಾಲ್ಲೂಕು ಕೂಡ್ಲೂರಿನ ಮಹಿಳೆಯರ ಭಜನಾ ತಂಡ, ಚಾಮರಾಜ ನಗರ ತಾಲ್ಲೂಕು ದೊಡ್ಡಹುಂಡಿಯ ಅಕ್ಕಮಹಾದೇವಿ ಮಹಿಳಾ ಭಜನಾ ತಂಡ ಹಾಗೂ ಬಾಗಲಕೋಟೆ ಜಿಲ್ಲೆಯ ಮಹಿಳಾ ಭಜನಾ ತಂಡಗಳು ಹಂಚಿಕೊಂಡವು.

ಕೇರಳ ಮಹಿಳಾ ವಿಭಾಗದ ಭಜನೆ ಸ್ಪರ್ಧೆಯಲ್ಲಿ ಕಾಸರಗೋಡಿನ ಗುಡ್ಡೆ ಮಹಾಲಿಂಗೇಶ್ವರ ಮಹಿಳಾ ಭಜನಾ ಸಂಘ ಕೇರಳದ ಜಾನಪದ ಶೈಲಿಯಲ್ಲಿ ಹಾಡಿ ಪ್ರಥಮ ಬಹುಮಾನವನ್ನು ಗಿಟ್ಟಿಸಿಕೊಂಡರೆ, ದೇವಿನಗರದ ಸೋಮನಾಥ ಭಜನಾ ಮಂಡಳಿಯವರು ವಿಶೇಷ ಭಜನಾ ಗೀತೆಗಳನ್ನು ಹಾಡುವ ಮೂಲಕ ಎರಡನೇ ಬಹುಮಾನವನ್ನು ಮುಡಿಗೇರಿಸಿಕೊಂಡರು. ಮೂರನೇ ಬಹುಮಾನವನ್ನು ಕಾಸರಗೋಡಿನ ಪ್ರತಾಪನಗರದ ಶ್ರೀಗೌರಿ ಗಣೇಶ ಮಹಿಳಾ ಭಜನಾ ತಂಡ ವಿಶೇಷ ಗಾಯನದ ಮೂಲಕ ಪಡೆಯಿತು.

# ಜಾತ್ರಾ ಮಹೋತ್ಸವ ಶ್ರೀ ಕ್ಷೇತ್ರದಲ್ಲಿಂದು

## 5 ಫೆಬ್ರವರಿ 2019 ಮಂಗಳವಾರ * ಬೆಳಗ್ಗೆ 10.30

### ಭಜನಾ ಮೇಳ : ಸಮಾರೋಪ

**ಸಮ್ಮುಖ : ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು,** ಶ್ರೀ ಮುರುಘಾ ಮಠ, ಆನಂದಪುರಂ, **ಯೋಗಾಚಾರ್ಯ ನಿ.ಪ್ರ.ಸ್ವ. ಡಾ. ಶ್ರೀ ಮಹಾಂತ ಸ್ವಾಮಿಗಳು,** ಶ್ರೀ ಸಂಸ್ಥಾನ ಮಠ, ಜಡೆ, ಸೊರಬ ತಾಲ್ಲೂಕು

**ಅಧ್ಯಕ್ಷತೆ : ಶ್ರೀ ಆರ್.ವಿ. ದೇಶಪಾಂಡೆ,** ಕಂದಾಯ ಸಚಿವರು, ಸಮಾರೋಪ **ಭಾಷಣ : ಡಾ.ಜಿ. ಪರಮೇಶ್ವರ,** ಉಪ ಮುಖ್ಯಮಂತ್ರಿಗಳು

### ಬಹುಮಾನ ವಿತರಣೆ

**ಪುರುಷರ ತಂಡ : ಶ್ರೀ ಕೆ.ಎಸ್. ಈಶ್ವರಪ್ಪ,** ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು

**ಮಕ್ಕಳ ತಂಡ : ಶ್ರೀ ಎಸ್.ಆರ್. ಶ್ರೀನಿವಾಸ್ (ವಾಸು),** ಸಣ್ಣ ಕೈಗಾರಿಕೆ ಸಚಿವರು

**ಏಕತಾರಿ ತಂಡ : ಶ್ರೀ ಬಸವರಾಜ ಎಸ್. ಹೊರಟ್ಟಿ,** ಶಾಸಕರು ಹಾಗೂ ಮಾಜಿ ಸಚಿವರು. **ಮಹಿಳಾ ತಂಡ : ಡಾ. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್,** ಮಾಜಿ ಸಚಿವರು

**ಮುಖ್ಯ ಅತಿಥಿಗಳು : ಶ್ರೀ ಶಂಕರ ಬಿ. ಪಾಟೀಲ ಮುನೇನಕೊಪ್ಪ,** ವಿಧಾನಸಭಾ ಸದಸ್ಯರು, ನವಲಗುಂದ, ಶ್ರೀ **ದತ್ತಾತ್ರೇಯ** ಸಿ. **ಪಾಟೀಲ್ ರೇವೂರ,** ವಿಧಾಸಭಾ ಸದಸ್ಯರು, ಕಲಬುರಗಿ, **ಶ್ರೀಮತಿ ಶಿವಮ್ಮ ಕೃಷ್ಣ,** ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಚಾಮರಾಜನಗರ, ಶ್ರೀ **ವಾಸು,** ಮಾಜಿ ವಿಧಾನಸಭಾ ಸದಸ್ಯರು, ಶ್ರೀ **ಶ್ರೀಶೈಲ್ ಹಾದಿಮನಿ,** ಅಧ್ಯಕ್ಷರು, ಉತ್ತರ ಅಮೆರಿಕ ವೀರಶೈವ ಸಮಾಜ, ಷಿಕಾಗೋ, **ಶ್ರೀಮತಿ ಪುಷ್ಪಲತಾ ಜಗನ್ನಾಥ್,** ಮಹಾಪೌರರು, ಮೈಸೂರು ಮಹಾನಗರಪಾಲಿಕೆ

## ಮಧ್ಯಾಹ್ನ 2.00 * ಕುಸ್ತಿ ಪಂದ್ಯಾವಳಿ

**ಸಮ್ಮುಖ : ಶ್ರೀ ಮಹಾಂತ ಸ್ವಾಮಿಗಳು,** ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠ, ದೇವನೂರು, ಶ್ರೀ ಶಿವಾನಂದ ಪುರಿ ಸ್ವಾಮಿಗಳು, ಶ್ರೀ ಕನಕಗುರು ಶಾಖಾ ಮಠ, ಕೃಷ್ಣರಾಜನಗರ

**ಅಧ್ಯಕ್ಷತೆ : ಶ್ರೀ ಯು.ಟಿ. ಖಾದರ್,** ನಗರಾಭಿವೃದ್ಧಿ ಸಚಿವರು

ಉದ್ಘಾಟನೆ : ಶ್ರೀ ಆರ್. ಅಶೋಕ್, ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು

**'ಸುತ್ತೂರು ಕುಮಾರ'** ಪ್ರಶಸ್ತಿ ವಿತರಣೆ : **ಶ್ರೀ ಮರಿತಿಬ್ಬೇಗೌಡ,** ಶಾಸಕರು ಹಾಗೂ ಮಾಜಿ ಉಪಸಭಾಪತಿಗಳು

**'ಸುತ್ತೂರು ಕೇಸರಿ'** ಪ್ರಶಸ್ತಿ ವಿತರಣೆ : **ಶ್ರೀ ತನ್ವೀರ್ ಸೇಠ್,** ಶಾಸಕರು ಹಾಗೂ ಮಾಜಿ ಸಚಿವರು

**ಮುಖ್ಯ ಅತಿಥಿಗಳು : ಶ್ರೀ ಆರ್. ನರೇಂದ್ರ,** ಶಾಸಕರು ಹಾಗೂ ಅಧ್ಯಕ್ಷರು, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, **ಶ್ರೀ ಕೆ.ಟಿ. ಶ್ರೀಕಂಠೇಗೌಡ,** ವಿಧಾನ ಪರಿಷತ್ ಸದಸ್ಯರು, ಮಂಡ್ಯ, **ಶ್ರೀ ಸಂದೇಶ್ ನಾಗರಾಜು,** ವಿಧಾನಪರಿಷತ್ ಸದಸ್ಯರು, ಮೈಸೂರು, **ಶ್ರೀ ಎಲ್. ನಾಗೇಂದ್ರ,** ವಿಧಾನಸಭಾ ಸದಸ್ಯರು, ಮೈಸೂರು, **ಶ್ರೀ ಎನ್. ಅಪ್ಪಾಜಿ ಗೌಡ,** ವಿಧಾನಪರಿಷತ್ ಸದಸ್ಯರು, ಮಂಡ್ಯ, **ಶ್ರೀ ಕೆ.ಜಿ. ಮಹೇಶ್,** ಅಧ್ಯಕ್ಷರು, ಜಿಲ್ಲಾ ಹಾಲು ಒಕ್ಕೂಟ (ನಿ.), ಮೈಸೂರು, ಶ್ರೀ ಸಿ.ಎಸ್. **ಗುರುಮಲ್ಲಪ್ಪ,** ಅಧ್ಯಕ್ಷರು, ಜಿಲ್ಲಾ ಹಾಲು ಒಕ್ಕೂಟ (ನಿ.), ಚಾಮರಾಜನಗರ, ಶ್ರೀ **ಅಮಿತ್ ಸಿಂಗ್,** ಪೊಲೀಸ್ ಅಧೀಕ್ಷಕರು, ಮೈಸೂರು

## ಸಂಜೆ 5.00 * ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ : ಸಮಾರೋಪ

**ಸಮ್ಮುಖ : ಡಾ. ಶ್ರೀ ವಿಶ್ವೇಶ ತೀರ್ಥ ತ್ರಿಪಾದಂಗಳವರು,** ಪೇಜಾವರ ಶ್ರೀ ಅಧೋಕ್ಷಜ ಮಠ, ಉಡುಪಿ, **ನಿ.ಪ್ರ.ಸ್ವ.** ಶ್ರೀ **ಗುರುಮಹಾಂತ ಮಹಾಸ್ವಾಮಿಗಳು,** ಶ್ರೀ ವಿಜಯ ಮಹಾಂತೇಶ್ವರ ಮಠ, ಇಳಕಲ್

**ಅಧ್ಯಕ್ಷತೆ : ಶ್ರೀ ವಿ. ಸೋಮಣ್ಣ,** ಶಾಸಕರು ಹಾಗೂ ಮಾಜಿ ಸಚಿವರು. **ಸಮಾರೋಪ ಭಾಷಣ : ಶ್ರೀ ಜಗದೀಶ್ ಎಸ್. ಶೆಟ್ಟರ್,** ಶಾಸಕರು ಹಾಗೂ ಮಾಜಿ ಮುಖ್ಯಮಂತ್ರಿಗಳು

**ಪಾರಿತೋಷಕ ವಿತರಣೆ : ಶ್ರೀ ಸಿ. ಪುಟ್ಟರಂಗಶೆಟ್ಟಿ,** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. **ಬಹುಮಾನ ವಿತರಣೆ : ಶ್ರೀ ಪ್ರತಾಪ ಸಿಂಹ,** ಲೋಕಸಭಾ ಸದಸ್ಯರು, ಮೈಸೂರು. **ಫಲಕ ವಿತರಣೆ : ಶ್ರೀ ರಾಮಲಿಂಗಾ ರೆಡ್ಡಿ,** ಶಾಸಕರು ಹಾಗೂ ಮಾಜಿ ಸಚಿವರು

**ಮುಖ್ಯ ಅತಿಥಿಗಳು : ಶ್ರೀ ಎಂ. ಶ್ರೀನಿವಾಸ್,** ವಿಧಾನಸಭಾ ಸದಸ್ಯರು, ಮಂಡ್ಯ, ಶ್ರೀ **ಬಿ.ಸಿ. ಪಾಟೀಲ್,** ವಿಧಾನಸಭಾ ಸದಸ್ಯರು, ಹಿರೇಕೆರೂರು, **ಡಾ. ಕೆ. ಅನ್ನದಾನಿ,** ವಿಧಾನಸಭಾ ಸದಸ್ಯರು, ಮಳವಳ್ಳಿ, **ಶ್ರೀ ಆರ್. ಧರ್ಮಸೇನ,** ವಿಧಾನಪರಿಷತ್ ಸದಸ್ಯರು, ಮೈಸೂರು, **ಶ್ರೀ ರಮೇಶ್ ಬಂಡಿಸಿದ್ದೇಗೌಡ,** ಮಾಜಿ ವಿಧಾನಸಭಾ ಸದಸ್ಯರು, ಶ್ರೀ **ಅಭಿರಾಮ್ ಜಿ. ಶಂಕರ್,** ಜಿಲ್ಲಾಧಿಕಾರಿಗಳು, ಮೈಸೂರು. **ಶ್ರೀ ಬಿ.ಜಿ. ಜ್ಯೋತಿಪ್ರಕಾಶ್ ಮಿರ್ಜಿ,** ಅಧ್ಯಕ್ಷರು, ವಿಶ್ವ ವೀರಶೈವ–ಲಿಂಗಾಯತ ಒಕ್ಕೂಟ

# ಸುತ್ತೂರು ಜಾತ್ರೆಯಲ್ಲಿ ಕೃಷಿಗೆ ಆದ್ಯತೆ



ಕೃಷಿ ವಿಚಾರಸಂಕಿರಣ ಉದ್ಘಾಟನೆ ಹಾಗೂ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹೆಚ್.ಡಿ. ಕೋಟೆ ತಾಲ್ಲೂಕಿನ ವಿಧಾನ ಸಭಾ ಸದಸ್ಯರಾದ ಶ್ರೀ **ಅನಿಲ್ ಕುಮಾರ್ ಅವರು** ಮಾತನಾಡುತ್ತಾ, ತಮ್ಮ ವಿದ್ಯಾರ್ಥಿಜೀವನದ ನೆನಪು ಗಳನ್ನು ತಿಳಿಸುತ್ತಾ, ಸುತ್ತೂರಿನ ಜಾತ್ರೆ ಯನ್ನು ವಿದ್ಯಾರ್ಥಿ ದೆಸೆಯಿಂದಲೂ ನೋಡುತ್ತಾ ಬಂದಿದ್ದೇನೆ. ಆಗಿನಿಂದಲೂ ಶ್ರೀಕ್ಷೇತ್ರವು ತನ್ನದೇ ಆದ ಧಾರ್ಮಿಕ ಮಹತ್ವವನ್ನು ಹೊಂದಿದೆ. ನನ್ನ ತಂದೆಯೂ ಕೂಡ ಸುತ್ತೂರಿನ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಎನಿಸುತ್ತದೆ. ನಾನು ಶ್ರೀಗಳನ್ನು ಚುನಾವಣಾ ಸಂದರ್ಭದಲ್ಲಿ ಭೇಟಿ ಮಾಡಿ ಆಶೀರ್ವಾದ ಪಡೆದಿದ್ದನ್ನು ಎಂದಿಗೂ ಮರೆಯಲಾರೆ. ಶ್ರೀಮಠ ಒಂದು ಶಕ್ತಿ ಕೇಂದ್ರವಾಗಿ ಇತಿಹಾಸ ಪ್ರಸಿದ್ಧಿಯನ್ನು ಪಡೆದಿದೆ. ಶ್ರೀಮಠವು ಕೃಷಿ ವಿಜ್ಞಾನ ಕೇಂದ್ರದ ಮೂಲಕ ರೈತರ ಪ್ರಗತಿಗೆ ಪೂರಕವಾದ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ ಎಂದು ತಿಳಿಸಿದರು. – ಎಸ್. ಸೋಮೇಶ



**ಸೋಮವಾರ ಶ್ರೀಮಠದ ಆವರಣದಲ್ಲಿ ಶ್ರೀ ಮಹದೇಶ್ವರ ಕೊಂಡೋತ್ಸವಕ್ಕೂ ಮುನ್ನ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕೊಂಡದ ಮರಮುಟ್ಟುಗಳಿಗೆ ಅಗ್ನಿಸ್ಪರ್ಶ ಮಾಡುತ್ತಿರುವುದು**

# ರಾಸಾಯನಿಕ ಗೊಬ್ಬರ ತ್ಯಜಿಸಿ ಸಾವಯವ ಗೊಬ್ಬರ ಬಳಸಿ



ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಕೃಷಿ ವಿಚಾರ ಸಂಕಿರಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಆನೇಕಲ್ ಕಂಬಳೀಪುರದ ಶ್ರೀ ವಿ. **ಕಾಂತರಾಜುರವರು** ರೈತರು ಸ್ವಾವಲಂಬಿ ಬದುಕನ್ನು ನಡೆಸಬೇಕೆಂದರೆ, ಸ್ವಂತ ಅನುಭೋಗಕ್ಕೆ ಬೆಳೆಗಳನ್ನು ಬೆಳೆಯಬೇಕು. ಮಾರಾಟ ಮಾಡುವ ಉದ್ದೇಶಕ್ಕಿಂತ ಜೀವನಕ್ಕಾಗಿ ಆಹಾರ ಬೆಳೆಗಳನ್ನು ಬೆಳೆಯುವಕಡೆ ಗಮನಹರಿಸುವುದು ಬಹಳ ಮುಖ್ಯವಾಗಿದೆ. ರಾಸಾಯನಿಕ ಗೊಬ್ಬರಗಳನ್ನು ತ್ಯಜಿಸುವ ಮೂಲಕ ಸಾವಯವ, ಎರೆಹುಳು ಹಾಗೂ ಕೊಟ್ಟಿಗೆ ಗೊಬ್ಬರಗಳನ್ನು ಬಳಸಿ ವ್ಯವಸಾಯ ಮಾಡಿ ಉತ್ತಮ ಬೆಳೆ ಬೆಳೆದು ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಕಡಿಮೆ ವೆಚ್ಚದಿಂದ ಹೆಚ್ಚು ಇಳುವರಿ ಪಡೆಯಬಹುದಾಗಿದೆ. ರೈತರು ಆಹಾರ ಬೆಳೆಗಳನ್ನಷ್ಟೇ ಬೆಳೆಯುವುದಕ್ಕೆ ಸೀಮಿತವಾಗದೆ, ತೋಟಗಾರಿಕೆ, ಹೈನುಗಾರಿಕೆಯನ್ನು ಮಾಡುವುದರ ಮೂಲಕ ನೈಜ ಕೃಷಿಕರೆನಿಸಿಕೊಳ್ಳವಲ್ಲಿ ಯಾವುದೇ ಸಂದೇಹವಿಲ್ಲ ಎಂದು ತಿಳಿಸಿದರು.

–ಬಿ.ಮಾನಸ



ಶ್ರೀಮಠದ ಆವರಣದಲ್ಲಿ ನಡೆದ ಶ್ರೀ ಮಹದೇಶ್ವರ ಕೊಂಡೋತ್ಸವ




**ಜಾತ್ರಾಮಹೋತ್ಸವದಲ್ಲಿ ಶ್ರೀಮಠದ ಸಾರಿಗೆ ಸಂಚಾರ ವ್ಯವಸ್ಥೆಯಲ್ಲಿ ನಿರಂತರವಾಗಿ ನೂರಾರು ನೌಕರರು ಸೇವೆ ಸಲ್ಲಿಸುತ್ತಿದ್ದು, ಸಾಂದರ್ಭಿಕ ಭೇಟಿ ನೀಡಿದ ಶ್ರೀ ಜಯರಾಜೇಂದ್ರ ಶ್ರೀಗಳವರೊಂದಿಗೆ ಚಾಲಕ ಬಂಧುಗಳು**

# ಕೃಷ್ಣೇಗೌಡರ ಲಹರಿ



ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಕೃಷಿವಿಚಾರ ಸಂಕಿರಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಮೈಸೂರಿನ ನಿವೃತ್ತ ಪ್ರಾಚಾರ್ಯರು ಹಾಗೂ ವಾಗ್ಮಿಗಳಾದ **ಪ್ರೊ. ಎಂ. ಕೃಷ್ಣೇಗೌಡರು** ಮಾತನಾಡುತ್ತಾ, ರೈತ ಕುಟುಂಬದಲ್ಲಿ ಹುಟ್ಟಿದ ನನಗೆ ಕೃಷಿಯ ಬಗ್ಗೆ ಅಪಾರವಾದ ಕಾಳಜಿ ಇತ್ತು. ತಂದೆಯ ಆಸೆಯಂತೆ ಉನ್ನತ ವ್ಯಾಸಂಗ ಮಾಡುವ ಸಲುವಾಗಿ ನಗರಕ್ಕೆ ವಲಸೆ ಬಂದುದರಿಂದ ಅನ್ನದಾತನಾಗುವ ಪುಣ್ಯ ಕೈತಪ್ಪಿತು. "ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು" ಎಂಬ ಗಾದೆಯಂತೆ ರೈತ ದೇಶದ ಬೆನ್ನೆಲುಬಾಗಿದ್ದು, ಇಂದಿನ ದಿನಮಾನಗಳಲ್ಲಿ ಗ್ರಾಮೀಣ ಪ್ರದೇಶದ ಜನರು ವ್ಯವಸಾಯದ ಮೂಲಕ ಬದುಕನ್ನು ಕಟ್ಟಿಕೊಳ್ಳುವುದರ ಜೊತೆಗೆ ರಾಷ್ಟ್ರದ ಆಧಾರಸ್ಥಂಭಗಳು ಆಗಿದ್ದಾರೆ. ಆದ್ದರಿಂದ ಕೃಷಿಕರು ಅನ್ಯತಾ ಕಾಲ ಹರಣ ಮಾಡದೇ ಹೊಸ ಹೊಸ ಮಾದರಿಯಲ್ಲಿ ವ್ಯವಸಾಯವನ್ನು ಕೈಗೊಳ್ಳುವಲ್ಲಿ ಜ್ಞಾನವನ್ನು ವೃದ್ಧಿಸಿಕೊಂಡು ದೇಶಕ್ಕೆ ಆಸ್ತಿಗಳಾಗಬೇಕೆಂದು ತಿಳಿಸಿದ ಅವರು, ಜಾತ್ರೆಯಲ್ಲಿ ತಿಂಡಿ ತಿನಿಸುಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗುವುದಕ್ಕಿಂತ ಬದುಕನ್ನು ಕಟ್ಟಿಕೊಳ್ಳುವ ಅರಿವಿನ ಮನಸ್ಸನ್ನು ಹೊತ್ತುಕೊಂಡು ಹೋಗುವುದು ಬಹಳ ಮುಖ್ಯವಾಗಿದೆ. ಅಮೆರಿಕಾದಂತಹ ದೊಡ್ಡ ರಾಷ್ಟ್ರಗಳು ತಮ್ಮ ಬೌದ್ಧಿಕ ಸಾಮರ್ಥ್ಯದಿಂದ ನಮ್ಮನ್ನು ಆಳುತ್ತಿರುವುದಕ್ಕೆ ನಮ್ಮ ಸೋಮಾರಿತನವೇ ಸಾಕ್ಷಿಯಾಗಿದೆ ಎಂದು ನುಡಿದರು. – ವಿ. ಪ್ರಿಯದರ್ಶಿನಿ

1ನೇ ಪುಟದಿಂದ

# ಕೃಷಿ ಒಂದು ಸಂಕೀರ್ಣ ಕ್ಷೇತ್ರ


ಮತ್ತು ಕ್ರಿಮಿ ನಾಶಕಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುವುದರ ಜೊತೆಗೆ ರೈತರ ಆರೋಗ್ಯದಲ್ಲಿ ಏರು ಪೇರು ಉಂಟಾಗಲು ಕಾರಣವಾಗಿದೆ. ಇಂದು ಕೃಷಿ ಒಂದು ಸಂಕೀರ್ಣ ಕ್ಷೇತ್ರವಾಗುತ್ತಿದೆ ಆದ್ದರಿಂದ ರೈತರು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನೇ ಅನುಸರಿಸಬೇಕು. ಸಾಂಪ್ರದಾಯಿಕ ಕೃಷಿಯನ್ನು ಅಭಿವೃದ್ಧಿಪಡಿಸುವಲ್ಲಿ ಸರ್ಕಾರವು ಅನೇಕ ಯೋಜನೆಗಳನ್ನು ಜಾರಿಗೆ ತಂದಿವೆ. ರೈತರು ಅವುಗಳನ್ನು ಉಪಯೋಗಿಸಿಕೊಳ್ಳಬೇಕು. ಕಡಿಮೆ ಮಳೆಯಲ್ಲಿ ಬೆಳೆಯುವಂತಹ ಬೆಳೆಗಳನ್ನು ಹೆಚ್ಚು ಬೆಳೆಯಬೇಕು. ರೈತರಿಗೆ ಇಂದು ಸರಿಯಾದ ಮಾರ್ಗದರ್ಶನ ಸಿಗುತ್ತಿಲ್ಲ. ಒಬ್ಬ ರೈತ ಬೆಳೆದ ಬೆಳೆಯನ್ನೇ ಎಲ್ಲಾ ರೈತರು ಬೆಳೆಯುವುದರಿಂದ ಅವರು ಬೆಳೆದ ಬೆಳೆಗೆ ಸರಿಯಾದ ಪ್ರತಿಫಲ ಸಿಗುತ್ತಿಲ್ಲ. ರೈತರ ಸಾಲಮನ್ನಾ ಯೋಜನೆಯು ರೈತರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೆ ತಂದು ರೈತರ ಜೀವನವನ್ನು ಉತ್ತಮಪಡಿಸಲು ಚರ್ಚೆ ನಡೆಸುತ್ತಿದೆ.

ರೈತರು ನೀರಿನ ಮಹತ್ವವನ್ನು ತಿಳಿದುಕೊಳ್ಳಬೇಕು. ಅವಶ್ಯಕ್ಕಿಂತ ಹೆಚ್ಚು ನೀರನ್ನು ಬಳಸಬಾರದು. ಅದಕ್ಕಾಗಿ ಸರ್ಕಾರ ನೀರಿನ ಸಂರಕ್ಷಣೆಗಾಗಿ 2.5 ಲಕ್ಷ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಲು ಸಹಾಯಧನ ನೀಡಲಾಗುತ್ತಿದೆ. ಇದರಿಂದ ಅನೇಕ ರೈತರಿಗೆ ಉಪಯುಕ್ತವಾಗಿದೆ ಅಲ್ಲದೆ ತುಂತುರು ಹಾಗೂ ಹನಿ ನೀರಾವರಿ ಪದ್ಧತಿಗಳಿಗೆ ಹೆಚ್ಚು ಒತ್ತು ನೀಡುಲಾಗುತ್ತಿದೆ. ಪ್ರತಿ ಹೋಬಳಿಯ ಮಟ್ಟದಲ್ಲಿ ರೈತರಿಗೆ ಯಂತ್ರೋಪಕರಣಗಳನ್ನು ಕಡಿಮೆ ಬೆಲೆಯಲ್ಲಿ ಬಾಡಿಗೆ ನೀಡುತ್ತಿದೆ. ಈ ಎಲ್ಲಾ ಯೋಜನೆಗಳನ್ನು ಕೇವಲ ಒಂದು ರಾಜ್ಯ ಜಾರಿ ಮಾಡಿದರೆ ಕೃಷಿಯಲ್ಲಿ ಅಭಿವೃದ್ಧಿ ಕಾಣಲು ಸಾಧ್ಯವಿಲ್ಲ. ರಾಷ್ಟ್ರಮಟ್ಟದಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ನಗರೀಕರಣದಿಂದ ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಗ್ರಾಮೀಣ ಯುವಕರು ಕೃಷಿಯಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳಲು ಸರ್ಕಾರ ಉತ್ತೇಜನ ನೀಡಬೇಕೆಂದು ತಿಳಿಸಿದರು. – ಹೆಚ್.ಆರ್. ಆದರ್ಶ್, ವಿನೋದ್ ಸಿ.





# ಕಾಡುತಿಹ ಪ್ರಾಣಿಯ ಕಾಟ...

ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭದಲ್ಲಿ 'ಹವಾಮಾನ ಬದಲಾವಣೆ ಮತ್ತು ಮಾರುಕಟ್ಟೆ' ಎಂಬ ವಿಷಯದ ಕುರಿತು ಮಾತನಾಡಿದ **ಡಾ. ನಟರಾಜನ್** (ಯುನೆಸ್ಕೋ) ಇವರು ಹವಾಮಾನ ಬದಲಾವಣೆಯಿಂದಾಗಿ ಅನೇಕ ದೇಶಗಳಲ್ಲಿ ಮಳೆ ಸಕಾಲಕ್ಕೆ ಬೀಳದೆ ಇರುವುದರಿಂದ ಕೃಷಿಯ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದೆ. ಕಾಡು ಪ್ರಾಣಿಗಳ ಹಾವಳಿಯಿಂದಾಗಿ ಬೆಳೆ ನಷ್ಟ ಉಂಟಾಗುತ್ತಿರುವುದು ರೈತರಿಗೆ ಸಮಸ್ಯೆಯಾಗಿ ಕಾಡುತ್ತಿದೆ. ಅರಣ್ಯ ಪ್ರದೇಶಗಳು ಕೃಷಿ ಭೂಮಿಯಾಗಿ ಪರಿವರ್ತನೆಯಾಗುತ್ತಿರುವುದರಿಂದ ಕಾಡು ಪ್ರಾಣಿಗಳಿಗೆ ತೊಂದರೆಯಾಗುತ್ತಿದೆ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಮೈಸೂರು ಜೀವ ವೈವಿಧ್ಯತೆಯ ತಾಣವಾಗಿದೆ. ಈ ಭಾಗದ ರೈತರಿಗೆ ಆಗುವ ಸಮಸ್ಯೆಗಳಿಗೆ ಪರಿಹಾರ ತಿಳಿಸಲು ಮೈಸೂರನ್ನೆ ಕೇಂದ್ರವಾಗಿಟ್ಟುಕೊಂಡು ರೈತರಿಗೆ ಸಹಾಯ ಮಾಡಬಹುದು ಎಂಬ ಹಿನ್ನೆಲೆಯಲ್ಲಿ ನಾವು ಮೈಸೂರಿಗೆ ಬಂದಿದ್ದೇವೆ. ಈ ಜಾತ್ರೆಯು ಸೂಕ್ತ ವಿಚಾರಗಳನ್ನು ಚರ್ಚೆ ಮಾಡುವ ವೇದಿಕೆಯಾಗಿದೆ. ಭಾರತ ವೈಶಿಷ್ಟ್ಯಪೂರ್ಣವಾದ ದೇಶ, ಜಾತ್ರಾ ಸಂಭ್ರಮದಲ್ಲೂ ರೈತರ ಸಮಸ್ಯೆಗಳನ್ನು ಇಟ್ಟುಕೊಂಡು ಚರ್ಚೆ ನಡೆಸುತ್ತಿರುವುದು. ಬಹಳ ವಿಶೇಷವಾಗಿದೆ ಎಂದರು. –ಆದರ್ಶ್ ಹೆಚ್. ಆರ್.



# ರೈತರು ತಮ್ಮ ಸಾಮರ್ಥ್ಯ ಅರ್ಥಮಾಡಿಕೊಳ್ಳಬೇಕು



ಕೃಷಿ ವಿಚಾರ ಸಂಕಿರಣ ಸಮಾರೋಪ ಸಮಾರಂಭದ ಸಮ್ಮುಖ ವಹಿಸಿದ್ದ ಶಿವಮೊಗ್ಗದ ಶ್ರೀ ಬಸವ ಕೇಂದ್ರದ **ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳವರು** ಶುಭಸಂದೇಶ ನೀಡಿ, ಇಸ್ರೇಲ್‌ಗೆ ಹೋಲಿಸಿಕೊಂಡರೆ ನಮ್ಮ ದೇಶದ ವಾತಾವರಣಕ್ಕೆ ಕೃಷಿ ತುಂಬಾ ಅನುಕೂಲಕರವಾಗಿದೆ. ಬಳಸಿಕೊಳ್ಳುವ ರೀತಿ–ನೀತಿ ಗಳು ನಮ್ಮಲ್ಲಿ ಸರಿಯಿಲ್ಲ, ಮಣ್ಣಿನ ಶಕ್ತಿ, ವಾಸಿಸುವ ಪ್ರದೇಶ ಹೇಗಿದೆ, ನನ್ನ ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು ಎಂದು ಅರ್ಥ ಮಾಡಿ ಕೊಂಡಾಗ ಮಾತ್ರ ರೈತ ಯಶಸ್ವಿಯಾಗಲು ಸಾಧ್ಯ. ರೈತರೆಲ್ಲರು ಸಂಪನ್ಮೂಲವನ್ನು ಬಳಸಿಕೊಳ್ಳುವ ರೀತಿಯನ್ನು ಅರಿಯಬೇಕು. ಡಾ. ಎ.ಪಿ.ಜೆ ಅಬ್ದುಲ್ ಕಲಾಮ್ ಹೇಳಿದ ಹಾಗೆ 'ಮಕ್ಕಳಿಗೆ ಗೆದ್ದವರ ಕಥೆಯನ್ನು ಓದಿಸಬೇಡಿ, ಸೋತವರ ಕಥೆಗಳನ್ನು ಓದಿಸಿ' ಹಾಗೂ ಕೃಷಿಕರ ವಿಚಾರದಲ್ಲಿ ಬಸವಣ್ಣನವರು ಹೇಳಿದ ಹಾಗೇ 'ಕೃಷಿ ಕೃತ್ಯ ಕಾಯಕ ಯಾವುದಾದರೇನು ತನುಮನ ಬಳಸಿಕೊಂಡು ದಾಸೋಹಗೈಯುವ ಪರಮಭಕ್ತರ ಪಾದ ತೋರಿಸೆಂದು' ಉಲ್ಲೇಖಿಸುತ್ತಾ ಸುತ್ತೂರು ಜಾತ್ರಾ ಮಹೋತ್ಸವ ಕಾರ್ಯಕ್ರಮಗಳನ್ನು ಪ್ರಶಂಸಿದರು. –ವಿನೋದ್ .ಸಿ

## ರೈತರು ಉತ್ತಮ ಬೆಳೆ–ಬೆಲೆ ಪಡೆಯಲಿ

ಮಾಜಿ ಲೋಕಸಭಾ ಸದಸ್ಯರಾದ **ಶ್ರೀ ಎಂ. ಶಿವಣ್ಣನವರು** ರೈತನ ಮಗನಾದ ನಾನು, ಚಾಮರಾಜನಗರ ಜಿಲ್ಲೆಯ ಜನರು ರೇಷ್ಮೆ ಬೆಳೆ ಬೆಳೆದು ಜೀವನ ನಡೆಸುತ್ತಿದ್ದ ಸಂದರ್ಭದಲ್ಲಿ ನಾನು ಹೊಸ ತಳಿಗಳನ್ನು ಬೇರೆ ಕಡೆಯಿಂದ ತಂದು ಬೆಳೆದಿದ್ದೆ ಎಂದು ತಮ್ಮ ಹಿಂದಿನ ದಿನಗಳನ್ನು ನೆನೆಸಿಕೊಂಡರು.



**ವಾಟಾಳ್ ಆನಂದ್**
**ಬಿ.ಎನ್. ನಿಜಲಿಂಗಪ್ಪ, ಜಯಶಂಕರ್**
**ಮಂಜುನಾಥ್, ಶಶಾಂಕ್**
**ನಂಜುಂಡನಾಯ್ಕ**

# ಗಾಳಿಪಟ ಸ್ಪರ್ಧೆ ಫಲಿತಾಂಶದ ವಿವರ



**ಪ್ರಾಥಮಿಕ ಶಾಲಾ ವಿಭಾಗ:** ತಯಾರಿಸಿ ಹಾರಿಸುವವರು ವಿಭಾಗದಲ್ಲಿ ನಂಜನಗೂಡಿನ ಕಾರ್ಮೆಲ್ ಇಂಗ್ಲಿಷ್ ಶಾಲೆಯ ಧನುಷ್ ಪ್ರಥಮ, ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕೀರ್ತನ್ ದ್ವಿತೀಯ, ರಾಘವೇಂದ್ರ ತೃತೀಯ ಹಾಗೂ ಭರತ್ ಮತ್ತು ಮೈಸೂರಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ನಿಕೇಶ್ ರಾವ್ ಕದಂ ಸಮಾಧಾನಕರ ಬಹುಮಾನವನ್ನು ಪಡೆದುಕೊಂಡರು.

ಖರೀದಿಸಿ ಹಾರಿಸುವವರು ವಿಭಾಗದಲ್ಲಿ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾದ ಸಂಪತ್ ಕುಮಾರ್ ಪ್ರಥಮ, ಆದರ್ಶ ದ್ವಿತೀಯ, ಮನೋಜ್‌ಕುಮಾರ್ ತೃತೀಯ, ಮಹೇಶ್ ಮತ್ತು ವೀರೇಶ್ ಸಮಾಧಾನಕರ ಬಹುಮಾನವನ್ನು ಪಡೆದುಕೊಂಡರು.


**ಪ್ರೌಢಶಾಲಾ ವಿಭಾಗ:** ತಯಾರಿಸಿ ಹಾರಿಸುವವರು ವಿಭಾಗದಲ್ಲಿ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ರೇವಣ್ಣಸಿದ್ದ ಪ್ರಥಮ, ಸಿ.ಜಿ. ಜಗ್ಗೇಶ್ ದ್ವಿತೀಯ, ವಿ.ಭರತ್‌ರಾಜ್ ತೃತೀಯ ಹಾಗೂ ಸಂತೋಷ್ ಮತ್ತು ಎಸ್. ಪ್ರಸಾದ್ ಸಮಾಧಾನಕರ ಬಹುಮಾನಗಳನ್ನು ಪಡೆದುಕೊಂಡರು.

ಖರೀದಿಸಿ ಹಾರಿಸುವವರು ವಿಭಾಗದಲ್ಲಿ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಭಾಗ್ಯಶ್ರೀ ಪ್ರಥಮ, ಪುನೀತ್ ಕುಮಾರ್ ದ್ವಿತೀಯ, ಮಲ್ಲಿಕಾರ್ಜುನ್ ತೃತಿಯ ಬಹುಮಾನವನ್ನು, ಬೆಂಗಳೂರಿನ ಕೋಣನಕುಂಟೆಯ ಜೆಎಸ್‌ಎಸ್ ಪ್ರೌಢ ಶಾಲೆಯ ಮಧು ಎಲ್ ಮತ್ತು ಸುತ್ತೂರಿನ ಜೆಎಸ್‌ಎಸ್ ಪ್ರೌಢ ಶಾಲೆಯ ಚೇತನ್ ಸಿ ಸಮಾಧಾನಕರ ಬಹುಮಾನಗಳನ್ನು ಪಡೆದುಕೊಂಡರು.

**ಕಾಲೇಜು ವಿಭಾಗ:** ತಯಾರಿಸಿ ಹಾರಿಸುವವರು ವಿಭಾಗದಲ್ಲಿ ಮಂಡ್ಯದ ಕೆ.ಆರ್.ಎಸ್.ನ ಸರ್ಕಾರಿ ಕಾಲೇಜಿನ ಚಂದನ ಪ್ರಥಮ, ಮೈಸೂರಿನ ಮಹಾರಾಜ ಕಾಲೇಜಿನ ವಿಜಯ್ ದ್ವಿತೀಯ, ಮೈಸೂರಿನ ಶ್ರೀಕಾಂತ ತೃತೀಯ, ಮೈಸೂರಿನ ನಟರಾಜ ಮಹಿಳಾ ಕಾಲೇಜಿನ ಸಹನ ಮತ್ತು ಮೈಸೂರಿನ ಅರುಣ್ ಎನ್ ಸಮಾಧಾನಕರ ಬಹುಮಾನಗಳನ್ನು ಪಡೆದುಕೊಂಡರು.

**ಸಾರ್ವಜನಿಕರ ವಿಭಾಗ:** ತಯಾರಿಸಿ ಹಾರಿಸುವವರು ವಿಭಾಗದಲ್ಲಿ ಚಾಮರಾಜನಗರ ಗುರುಸಿದ್ದಪ್ಪ ಅರಳಿಕಟ್ಟೆ ಪ್ರಥಮ, ಧಾರವಾಡದ ಅಮರಗೋಳದ ನಾಗಪ್ಪ ಜ್ಯೋತಿ ಕರಾಂಡೆ ದ್ವಿತೀಯ, ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ರಾಮಪ್ಪ ಗಂಗಪ್ಪನೂರು ತೃತೀಯ ಹಾಗೂ ನಂಜನಗೂಡು ತಾಲ್ಲೂಕಿನ ಕಾಹಳ್ಳಿಯ ರವಿಕುಮಾರ ಮತ್ತು ದೇವನೂರಿನ ಮಹೇಶ ಸಮಾಧಾನಕರ ಬಹುಮಾನಗಳನ್ನು ಪಡೆದುಕೊಂಡರು.

**ವಿಶೇಷ ಬಹುಮಾನ :** ಮೈಸೂರಿನ ಜೆಎಸ್‌ಎಸ್ ಸಹನಾ ಶಾಲೆಯ ತರುಣ್ ಎಂ ತೋಟಗೇರೆ ಪ್ರಥಮ ಹಾಗೂ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ಅಖಿಲೇಶ್ ದ್ವಿತೀಯ ವಿಶೇಷ ಬಹುಮಾನಗಳನ್ನು ಪಡೆದುಕೊಂಡರು.



ಲಕ್ಷದೀಪೋತ್ಸವದ ವಿಹಂಗಮ ನೋಟ...

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore - 570 015